ಕರ್ನಾಟಕ ಗಾಂಧೀ ಸ್ಮಾರಕ ನಿಧಿ

ಬಾಪು ಪ್ರಪಂಚ

BAPU PRAPANCHA

ಕನ್ನಡ - English Monthly

ಸಂಪುಟ – 2 ಸಂಚಿಕೆ – 4 ಜುಲೈ 2020 ₹ 20/-



ಕರ್ನಾಟಕ ಗಾಂಧೀ ಸ್ಮಾರಕ ನಿಧಿ

ಕನ್ನಡ - ಇಂಗ್ಲಿಷ್ ಮಾಸಪತ್ರಿಕೆ

BAPU PRAPANCHA

(A Monthly Kannada - English Magazine of Gandhian Thoughts)

ಪ್ರಧಾನ ಸಂಪಾದಕರು : ಡಾ.ವೂಡೇ ಪಿ. ಕೃಷ್ಣ

Chief Editor : **Dr. Wooday P. Krishna**

ಸಂಪಾದಕರು : ಇಂದಿರಾ ಕೃಷ್ಣಪ್ಪ

Editor : **Indira Krishnappa**

ಸಲಹಾ ಸಂಪಾದಕರು : ವಿ.ಎನ್. ತಿಪ್ಪನಗೌಡ

Advisory Editor : **V.N. Tippana Gouda**

ಪ್ರಕಾಶಕರು : ಕಾರ್ಯದರ್ಶಿ

ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಗಾಂಧೀ ಭವನ

ಕುಮಾರ ಪಾರ್ಕ್ ಪೂರ್ವ, ಬೆಂಗಳೂರು-560001

Published by :

Karnataka Gandhi Smaraka Nidhi

Gandhi Bhavana, Kumarapark East

Bengaluru - 560001

Phone : +91 80 22261967, 9738605799

gandhibhavanabengaluru@gmail.com

Design & Print : **CreativeGeekZ**

Yadhava College Road, Madhavanagara

Bengaluru - 560001

Ph : +91 80 40927049

E-mail : mail@creativegeekz.com

ಈ ಸಂಚಿಕೆಯಲ್ಲಿ

ಸಂಪಾದಕೀಯ



ಇಂದಿರಾ ಕೃಷ್ಣಪ್ಪ

ಎಲ್ಲರಿಗೂ ವಂದನೆಗಳು,

ಬಾಪು ಪ್ರಪಂಚ ಈ ಸಂಚಿಕೆಯನ್ನು ಓದುತ್ತಿರುವ ಕರೋನಾದಿಂದ ಇದುವರೆವಿಗೂ ಜಯಿಸಿರುವ ತಮ್ಮೆಲ್ಲರಿಗೂ ಶುಭಾಶಯಗಳು. ಹಾಗೆಯೇ ಕೋವಿಡ್ – 19ರಿಂದಾಗಿ, ನೆರವು, ಸಹಕಾರ, ಅರಿವು ದೊರಕದೆ ನಿಧನರಾದ ಮುಗ್ಧಜೀವಿಗಳಿಗೆ ಶ್ರದ್ಧಾಂಜಲಿಗಳನ್ನು ಸಲ್ಲಿಸೋಣ. ಕರ್ನಾಟಕದ ರಾಜಧಾನಿ ಬೆಂಗಳೂರು ನಗರ ಕರೋನ ಸೋಂಕಿಗೆ ಜನ್ಮಸ್ಥಾನವಾಗುತ್ತಿದೆ ಎಂದು, ವಲಸೆ ಕಾರ್ಮಿಕರು, ಬಡವರು, ನಿರ್ಗತಿಕರು, ಅಲೆಮಾರಿ – ಬುಡಕಟ್ಟು ಜನಾಂಗ, ಶ್ರಮಜೀವಿಗಳು, ಬೆಂಗಳೂರಿನಿಂದ ಅವರ ಮೂಲ ಊರುಗಳಿಗೆ ದೌಡಾಯಿಸುತ್ತಿದ್ದಾರೆ. 'ಸ್ಟೇ ಹೋಂ – ಸ್ಟೇ ಸೇಫ್' ಎಂಬ ಕರೆ "ಮನೆಗಳೇ ಇಲ್ಲದ" ಸುಮಾರು 5000 ದಷ್ಟು ಜನ ಎಲ್ಲಿ ಸುರಕ್ಷಿತರಾಗಿರಬೇಕು? ಇನ್ನೂ ಹುಲ್ಲು, ತಡಿಕೆ, ಮಣ್ಣು, ತಗಡು, ಕಲ್ಲು, ಪ್ಲಾಸ್ಟಿಕ್ ಶೀಟ್, ಹಲಗೆಗಳಿಂದ ನೆರಳು ಮಾಡಿಕೊಂಡಿರುವ, ಸುಮಾರು 16 ಲಕ್ಷದಷ್ಟು ಮಂದಿ, ಬಾಡಿಗೆ ಮನೆಯಲ್ಲಿರುವ 5 ಲಕ್ಷದಷ್ಟು ಮಂದಿಗೆ "ಮನೆಯಲ್ಲೇ ಇರಿ" ಎಂದರೆ ಹೇಗೆ ಸಾಧ್ಯವಾಗುತ್ತದೆ? ಜೊತೆಗೆ ಮೂಲಭೂತ ಸೌಕರ್ಯಗಳಿಲ್ಲದ ಇವರು ಹೇಗೆ ಮನೆಯಲ್ಲಿರಲು ಸಾಧ್ಯ? ನಿತ್ಯ ದುಡಿದುಣ್ಣುವ ಜೀವಿಗಳಿಗೆ, 'ಲಾಕ್‌ಡೌನ್'ನಿಂದಾಗಿ ಸ್ಥಗಿತಗೊಂಡ ಉತ್ಪಾದನಾ ಸಂಸ್ಥೆಗಳು, ನಿಂತೇ ಹೋದ ವ್ಯಾಪಾರ ವ್ಯವಹಾರಗಳಿಂದಾಗಿ ಹೇಗೆ ದುಡಿಮೆಯ ಮಾರ್ಗಗಳು ದೊರಕುತ್ತವೆ? ವಾಸಕ್ಕೆ ತಾವುಗಳಿಲ್ಲ, ಕೈಗಳಿಗೆ ಕೆಲಸವಿಲ್ಲ, ಮತ್ತೆ ಕರೋನಾ ಭೀತಿಯಿಂದಾಗಿ ಬೆಂಗಳೂರು ನಗರ, ಗ್ರಾಮಾಂತರ ಪ್ರದೇಶಗಳಿಂದ ಉತ್ತರ ಕರ್ನಾಟಕದ ಕಡೆಗೆ ಮತ್ತೆ ಹೊರರಾಜ್ಯಗಳಿಗೆ ಮಕ್ಕಳು, ಮಹಿಳೆಯರನ್ನು ಕಟ್ಟಿಕೊಂಡು, ಅಳಿದುಳಿದ ಸಾಮಾನು ಸರಂಜಾವು ಹೊತ್ತುಕೊಂಡು, ಹಸಿವು – ಬಾಯಾರಿಕೆ ಒಡಲಲ್ಲಿ ತುಂಬಿಕೊಂಡು, ಬಿಸಿಲು, ಚಳಿ, ಮಳೆ ಗಾಳಿಯನ್ನೂ ಲೆಕ್ಕಿಸದೆ ಬರಿಗಾಲಲ್ಲಿ, ಗಾಡಿಗಳಲ್ಲಿ, ಟ್ರಕ್ಕು, ಲಾರಿಗಳಲ್ಲಿ ನಿರ್ಗಮಿಸುತ್ತಿದ್ದಾರೆ. ಇದು ಭಾರತ–ಪಾಕಿಸ್ತಾನ ಇಬ್ಭಾಗವಾದ ಸಂದರ್ಭದಲ್ಲಿ ಜನರು ಅವರ ಮೂಲಸ್ಥಾನವನ್ನೋ, ಮಾತೃಭೂಮಿಯನ್ನೋ ಅರಸಿ ಹೊರಟ 'Great March' ನಂತೆ ಗೋಚರವಾಗುತ್ತಿದೆ.

ಕರೋನ ಭೀಕರತೆಯಿಂದ ತತ್ತರಿಸುತ್ತಿರುವ ಸಂದರ್ಭದಲ್ಲಿಯೇ ಭಾರತ – ಚೀನಾ ಯುದ್ಧದ ಭೀತಿ ಹರಡುತ್ತಿದೆ. ಯುದ್ಧ ಯಾರಿಗೆ ಬೇಕಾಗಿದೆ? ರಾಜಕಾರಣ ಅನೀತಿಯೆಡೆಗೆ ಸಾಗುತ್ತಿದೆಯೇ? ಆಕ್ರಮಣವೇ ಮಾರ್ಗವೇ? ದೇಶದ ಅಭಿವೃದ್ಧಿಗೆ ಯುದ್ಧವೇ ಶತ್ರುವಲ್ಲವೇ? ಪ್ರಕೃತಿಯ ಮುನಿಸಿನಿಂದಾದ ಕರೋನಾದಿಂದ ಅಳಿವು ಉಳಿವಿನ ದುಸ್ಥಿತಿ ಎದುರಿಸುತ್ತಿರುವ ಜನತೆ ಯುದ್ಧ ಬಯಸಿದ್ದಾರೆಯೇ? ಟಿವಿ ಮಾಧ್ಯಮಗಳಲ್ಲಿ ಕುಳಿತು, ದೇಶಭಕ್ತಿ, ಭಾರತೀಯತೆ ಬಗ್ಗೆ ಮಾತನಾಡುವ ಮಂದಿ ಸ್ವತಂತ್ರ ಭಾರತ ಕಂಡ ಯುದ್ಧಗಳು ಮತ್ತು ಪ್ರಪಂಚದಲ್ಲಿ ನಡೆದ ಭೀಕರ ಯುದ್ಧಗಳ ಪರಿಣಾಮಗಳನ್ನು ಏನು ಬಲ್ಲರು? ಸಾವು ನೋವು, ರೋಗರುಜಿನ, ಕಷ್ಟನಷ್ಟ, ಅನಾಥರಾಗುವ ಜನತೆ, ಸೈನಿಕರ ಬಲಿ ಬೇಕಾಗಿಲ್ಲ. ಯುದ್ಧದಿಂದ ಶಾಂತಿ ಸಾಧಿಸಲಾಗುವುದಿಲ್ಲವೆಂಬುದು ಇತಿಹಾಸದ ಪಾಠ. ಯುದ್ಧದಿಂದ ರಾಜಕಾರಣಿಗಳು, ಉದ್ಯಮಿಗಳು, ಶಸ್ತ್ರಾಸ್ತ್ರ ಕಂಪನಿಗಳು ಲಾಭ ಪಡೆಯುವರೇ ವಿನಹ, ಪ್ರಜೆಗಳಲ್ಲಿ, "ರಕ್ತಕ್ಕೆ ರಕ್ತ, ದಾಳಿಗೆ ಪ್ರತಿದಾಳಿ" ಎಂದು ಅರಚುವ ಹುಸಿದೇಶ ಪ್ರೇಮಿಗಳು ತಮ್ಮ ಮನೆಯವರನ್ನು ಸೈನಿಕನಾಗಲು ಕಳುಹಿಸಿದ್ದಾರೆಯೇ? ಆದ್ದರಿಂದ "ಯುದ್ಧ ಬೇಡ – ಶಾಂತಿ ಬೇಕು" ಎಂಬ ಪ್ರಜೆಗಳ ಕೂಗು ಪ್ರಜಾಪ್ರತಿನಿಧಿಗಳ ಕಿವಿಗಳನ್ನು, ಹೃದಯವನ್ನು, ಮಿದುಳನ್ನು ಬಡಿದೆಬ್ಬಿಸಲಿ. ಭಾರತದ ಅಶೋಕಚಕ್ರ, ಬುದ್ಧನ ಶಾಂತಿ, ಕರುಣೆ, ಮಹಾತ್ಮ ಗಾಂಧೀಜಿ ಅವರ ಚಿಂತನೆಗಳಿಂದ ಮಾತ್ರ ಕರೋನ ಮತ್ತು ಯುದ್ಧದಿಂದ ನಾವು ಉಳಿಯಬಹುದು. ಗಾಂಧಿ ಅವರ ಗ್ರಾಮಸ್ವರಾಜ್ಯ, ಸ್ವಾವಲಂಬನೆ, ಗ್ರಾಮೋದ್ಯೋಗ, ಅಹಿಂಸಾ ತತ್ವಗಳು ಆಡಳಿತಗಾರರ ಧ್ಯೇಯವಾಗಲಿ. ಪಡಿತರ ಹಂಚಿಕೆಯಲ್ಲಿ ಸುಧಾರಣೆ, ಸಣ್ಣ ಪುಟ್ಟ ಉದ್ಯಮಗಳಿಗೆ ಸಹಾಯಧನ, ಆರೋಗ್ಯ ರಕ್ಷಣೆ ಸುಲಭವಾಗಿ ಶೀಘ್ರವಾಗಿ ದೊರಕುವುದು, ಬಡವರಿಗೆ ಜೀವನಾವಶ್ಯಕವಾದ ಕನಿಷ್ಠ ಧನಸಹಾಯ ನೇರ ವರ್ಗಾವಣೆ ಮತ್ತು ರೈತರು, ಕಾರ್ಮಿಕರಿಗೆ, ಉದ್ಯೋಗ ಭರವಸೆಗಳು ತಕ್ಷಣದಲ್ಲಿಯೇ ಆಗಬೇಕಾಗಿದೆ. ಇವುಗಳು ಕಾರ್ಯಗತವಾಗಲು ಸರ್ಕಾರದೊಂದಿಗೆ ಕೈಜೋಡಿಸೋಣ ಮತ್ತು ನಾವೆಲ್ಲರೂ ನಮ್ಮ ಹಂತದಲ್ಲಿ ಕಾರ್ಯನಿರ್ವಹಿಸೋಣ.

ನಮಸ್ಕಾರಗಳು....



ಬ್ಯಾರಿಸ್ಟರ್ ಏನೋ ಆದೆ-ಆದರೆ ಆಮೇಲೆ?

ಗಾಂಧೀಜಿ ಅವರ "ನನ್ನ ಸತ್ಯಾನ್ವೇಷಣೆ' ಕೃತಿಯಿಂದ ಆಯ್ದ ಭಾಗ

(ಗಾಂಧೀಜಿ ಅವರ ಜೀವನದಲ್ಲಿ ನಡೆದ ಹಲವಾರು ಘಟನೆಗಳು ಇಂದಿನ ಹಲವು ಸಂಕಷ್ಟದಲ್ಲಿ ದಾರಿತೋರುವ ದೀವಿಗೆಗಳಾಗಿವೆ. ಹೀಗಾಗಿ ಗಾಂಧೀಜಿ ಅವರ ಆತ್ಮಕಥೆಯ ಆಯ್ದ ಭಾಗಗಳನ್ನು ನಿಯತವಾಗಿ ಪ್ರಕಟಿಸುತ್ತಿದ್ದೇವೆ.)

(ಕಳೆದ ಸಂಚಿಕೆಯಿಂದ ಮುಂದುವರೆದ ಭಾಗ)

ನಾನು ಇಂಗ್ಲೆಂಡಿಗೆ ಹೋದ ಉದ್ದೇಶವನ್ನು, ಬ್ಯಾರಿಸ್ಟರ್ ಆಗುವುದನ್ನು ಕುರಿತು ನಾನು ಇದುವರೆಗೆ ಏನನ್ನೂ ಹೇಳಲಿಲ್ಲ. ಆ ವಿಚಾರವಾಗಿ ಕೆಲವು ಮಾತುಗಳನ್ನು ಸಂಕ್ಷೇಪವಾಗಿ ಹೇಳಲು ಈಗ ಕಾಲವೊದಗಿದೆ.

ಒಬ್ಬ ವಿದ್ಯಾರ್ಥಿಯು ಬ್ಯಾರಿಸ್ಟರ್ ಆಗಬೇಕಾದರೆ ಎರಡು ಷರತ್ತುಗಳನ್ನು ಪಾಲಿಸಬೇಕಾಗಿತ್ತು: 'ಟರ್ಮುಗಳನ್ನು ಉಳಿಸುವುದು' ಒಬ್ಬ ವಿದ್ಯಾರ್ಥಿ ಹನ್ನೆರಡು ಟರ್ಮುಗಳು, ಎಂದರೆ ಮೂರು ವರ್ಷಗಳನ್ನು ಕಾಲೇಜಿನಲ್ಲಿ ಕಳೆಯುವುದು, ಮತ್ತು ಪರೀಕ್ಷೆಯಲ್ಲಿ ತೇರ್ಗಡೆಯಾಗುವುದು. ಟರ್ಮುಗಳನ್ನು ಉಳಿಸುವುದು ಎಂದರೆ, ಟರ್ಮುಗಳ ಅವಧಿಯಲ್ಲಿ ತಿನ್ನುವುದು ಎಂದು ಅರ್ಥ. ಏಕೆಂದರೆ ಒಂದು ಟರ್ಮಿನ ಇಪ್ಪತ್ತನಾಲ್ಕು ಭೋಜನಕೂಟಗಳ ಪೈಕಿ, ವಿದ್ಯಾರ್ಥಿ ಆರು ಕೂಟಗಳಲ್ಲಿಯಾದರೂ ಹೋಗಿ ಊಟ ಮಾಡಬೇಕಾಗಿತ್ತು. ತಿನ್ನುವುದು ಎಂದರೆ, ತಿನ್ನಬೇಕೆಂದು ಅರ್ಥವಲ್ಲ. ಆದರೆ ಊಟಕ್ಕೆ ಬಂದಿದ್ದೇನೆ ಎಂಬುದನ್ನು ಸಕಾಲದಲ್ಲಿ ಪ್ರಕಟಿಸಿ ಊಟ ಮುಗಿಯುವವರೆಗೆ ಅಲ್ಲಿಯೇ ಇರಬೇಕಾಗಿತ್ತು. ದೊರೆಯುತ್ತಿದ್ದ ಒಳ್ಳೆಯ ಭೋಜನ ಮತ್ತು ಉತ್ತಮವಾದ ಮದ್ಯವನ್ನು ಎಲ್ಲರೂ ಸಾಧಾರಣವಾಗಿ ತಿನ್ನುತ್ತಿದ್ದರು ಮತ್ತು ಕುಡಿಯುತ್ತಿದ್ದರು. ಒಂದು ಊಟಕ್ಕೆ ಎರಡೂವರೆ ಷಿಲಿಂಗ್‌ನಿಂದ ಮೂರುವರೆ ಷಿಲಿಂಗ್‌ವರೆಗೆ ಖರ್ಚು ಬೀಳುತ್ತಿತ್ತು. ಅಂದರೆ ಎರಡರಿಂದ ಮೂರು ರೂಪಾಯಿ. ಈ ಬೆಲೆ ಅಷ್ಟೇನೂ ಹೆಚ್ಚಲ್ಲವೆಂದು ಜನ ಭಾವಿಸಿದ್ದರು. ಏಕೆಂದರೆ ಒಂದು ಭೋಜನ ಗೃಹಕ್ಕೆ ಹೋದರೆ ಬರಿಯ ಮದ್ಯಕ್ಕೆ ಮಾತ್ರ ಅಷ್ಟು ಹಣವನ್ನು ನೀಡಬೇಕಾಗುತ್ತಿತ್ತು. ಭಾರತದಲ್ಲಿರುವ ನಮಗೆ ನಾವು 'ನಾಗರಿಕ'ರಾಗದಿದ್ದಲ್ಲಿ ಆಹಾರಕ್ಕಿಂತ ಕುಡಿತಕ್ಕೆ ಬೆಲೆ ಹೆಚ್ಚಾದರೆ ಆಶ್ಚರ್ಯವಾಗುತ್ತದೆ. ಈ ವಿಷಯ ನನಗೆ ಮೊದಲು ತಿಳಿದಾಗ ನಾನು ಬೆಚ್ಚಿಬಿದ್ದೆ. ಹೀಗೆ ಹಣವನ್ನು ಕುಡಿತಕ್ಕಾಗಿ ಪೋಲು ಮಾಡಲು ಜನರಿಗೆ ಹೇಗೆ ಮನಸ್ಸು ಬರುತ್ತದೆ ಎಂದು ನನಗೆ ಆಶ್ಚರ್ಯವಾಯಿತು. ಅನಂತರ ನನಗೆ ವಿಷಯಗಳು ತಿಳಿದು, ಈ ಭೋಜನಕೂಟಗಳಲ್ಲಿ ನಾನು ಸಾಧಾರಣವಾಗಿ ಏನನ್ನು ತಿನ್ನುತ್ತಲೇ ಇರಲಿಲ್ಲ. ಏಕೆಂದರೆ ಅಲ್ಲಿ ನಾನು ತಿನ್ನಬಹುದಾಗಿದ್ದುದು ರೊಟ್ಟಿ, ಬೇಯಿಸಿದ ಆಲೂಗಡ್ಡೆ, ಕೋಸುಗಡ್ಡೆ, ಅದು ಮೊದಮೊದಲು ನನಗೆ ರುಚಿಸಲಿಲ್ಲವಾಗಿ ನಾನು ಅವನ್ನು ತಿನ್ನುತ್ತಿರಲಿಲ್ಲ. ಆದರೆ ನಾನು ಅವುಗಳ ರುಚಿಯನ್ನು ತಿಳಿದು ತಿನ್ನಲು ಪ್ರಾರಂಭಿಸಿದ ಮೇಲೆ ಇತರ ಪದಾರ್ಥಗಳನ್ನು ಕೇಳಿ ತರಿಸಲು ನನಗೆ ಧೈರ್ಯವುಂಟಾಯಿತು.

ವಿದ್ಯಾರ್ಥಿಗಳ ಊಟಕ್ಕಿಂತ ಬೆಂಚರ್‌ಗಳ (ವಿದ್ಯಾಮಂದಿರದ ಮಂಡಳಿಯ ಸದಸ್ಯರು) ಆಟ ಹೆಚ್ಚಿನ ಉತ್ತಮವಾಗಿರುತ್ತಿತ್ತು. ಶಾಖಾಹಾರಿಯಾಗಿದ್ದ ಒಬ್ಬ ಪಾರಸಿ ವಿದ್ಯಾರ್ಥಿ ನಾನು, ಶಾಖಾಹಾರಿ ತತ್ತ್ವದ ಹಿತದೃಷ್ಟಿಯಿಂದ "ಬೆಂಚರು"ಗಳ ಜೊತೆ ನಮಗೂ ಶಾಖಾಹಾರಿ ತಿಂಡಿಗಳನ್ನು ಒದಗಿಸಬೇಕೆಂದು ಕೋರಿದೆವು. ನಮ್ಮ ಪ್ರಾರ್ಥನೆಗೆ ಮನ್ನಣೆ ದೊರೆಯಿತು. ನಾವು ಬೆಂಚರ್‌ಗಳ ಅಡಿಗೆಮನೆಯಿಂದ ಹಣ್ಣುಗಳನ್ನೂ ಇತರ ತರಕಾರಿಗಳನ್ನು ತರಿಸಿ ತಿನ್ನತೊಡಗಿದೆವು.

ಈ ಊಟಗಳಿಂದ ವಿದ್ಯಾರ್ಥಿಗಳಿಗೆ ಬ್ಯಾರಿಸ್ಟರ್ ಆಗಲು ಹೇಗೆ ಹೆಚ್ಚು ಯೋಗ್ಯತೆಯುಂಟಾಯಿತು ಎಂಬುದು ಆಗ ನನಗೆ ಅರ್ಥವಾಗಲಿಲ್ಲ, ಈಗಲೂ ಆಗಿಲ್ಲ. ಒಂದು ಕಾಲದಲ್ಲಿ ಕಡಿಮೆ ಸಂಖ್ಯೆ ವಿದ್ಯಾರ್ಥಿಗಳು ಇಂತಹ ಊಟಗಳಿಗೆ ಬರುತ್ತಿದ್ದರು. ಈ ಸಂದರ್ಭಗಳಲ್ಲಿ ಅವರಿಗೂ 'ಬೆಂಚರ್'ಗಳಿಗೂ ಮಾತುಕತೆಯಾಡಲು, ಒಂದೊಂದು ವೇಳೆ ಭಾಷಣಗಳನ್ನು ಸಹ ಮಾಡಲು ಅವಕಾಶವುಂಟಾಗುತ್ತಿತ್ತು. ಆದರೆ ನಾನು ಅಲ್ಲಿದ್ದ ಕಾಲದಲ್ಲಿ ಅದಾವುದೂ ಸಾಧ್ಯವಿರಲಿಲ್ಲ. "ಬೆಂಚರ್'ಗಳಿಗಾಗಿಯೇ ಬೇರೆ ಭೋಜನದ ಮೇಜನ್ನು ಒದಗಿಸಿದ್ದರು. ಆ ಪದ್ಧತಿಯಲ್ಲಿ ಮೊದಲು ಇದ್ದ ಅರ್ಥ ಇಲ್ಲವಾಗಿತ್ತು. ಆದರೆ ಸಂಪ್ರದಾಯ ಬದ್ಧವಾದ ಇಂಗ್ಲೆಂಡ್ ಇನ್ನೂ ಈ ಪದ್ಧತಿಯನ್ನು ಉಳಿಸಿಕೊಂಡಿತ್ತು.

ಮುಂದುವರಿಯುವುದು....

ಧಾರವಾಡದಲ್ಲಿ ಗೋಲಿಬಾರು (1-7-1921)

ಮೋ. ಕ. ಗಾಂಧಿ (ಗಾಂಧಿ ಮತ್ತು ಕರ್ನಾಟಕ ಕೃತಿಯಿಂದ)
ಸಂಪಾದನೆ : ಸಿದ್ದವನಹಳ್ಳಿ ಕೃಷ್ಣಶರ್ಮ

"ಗಾಂಧೀಜಿ ಅವರ ವಿಚಾರಗಳು - ಚಿಂತನೆಗಳು - ಈ ಅಂಕಣದಲ್ಲಿ ಗಾಂಧೀಜಿ ಅವರು ಕೈಗೊಂಡ ನಿಲುವು ನಿರ್ಧಾರಗಳನ್ನು ಇಲ್ಲಿ ಪ್ರಸ್ತುತಪಡಿಸಲಾಗಿದೆ. ಈ ಅಂಕಣವು ನಿಯತವಾಗಿ ಬರಲಿದೆ.

ಧಾರವಾಡದಲ್ಲಿ 1-7-1921ರಂದು ಹೆಂಡದ ಗಡಂಗದ ಮುಂದೆ ಪಿಕೆಟಿಂಗ್ ನಡೆದಿತ್ತು. ಅಂದಿನ ಕಾಂಗ್ರೆಸ್ ಕಾರ್ಯಕ್ರಮದ ಪ್ರಕಾರ ಈ ಪಿಕೆಟಿಂಗ್ ನಡೆದಾಗ ಪೊಲೀಸ್ ಅಧಿಕಾರಿಗಳು ಗುಂಡು ಹಾರಿಸಿದ ಪರಿಣಾಮವಾಗಿ ಮೂರು ಜನರು ಅಸು ನೀಗಿದರು. ಈ ಪ್ರಕರಣದಲ್ಲಿ ಧಾರವಾಡದ ಅನೇಕ ಕಾಂಗ್ರೆಸ್ ಕಾರ್ಯಕರ್ತರನ್ನು ಸುಳ್ಳು ಆರೋಪಗಳ ಮೇಲೆ ಸರಕಾರ ಬಂಧಿಸಿತು. ಹೀಗೆ ಬಂಧಿತರಾದವರಲ್ಲಿ ಸರ್ವಶ್ರೀ ಗೋಪಾಳರಾವ ದೇಶಪಾಂಡೆ, ಹನುಮಂತರಾವ ದೇಸಾಯಿ, ರಂಗರಾವ ದಿವಾಕರ, ಕೃಷ್ಣರಾವ ಮುದವೇಡಕರ, ವೆಂಕಟರಾವ ಮುದವೇಡಕರ, ಗೋವಿಂದಾಚಾರ್ಯ ಗುತ್ತಲ ವಕೀಲ, ಮಧ್ವರಾವ ಕಬ್ಬೂರ ವಕೀಲ, ಅನಂತರಾವ ದಾಬಡೆ, ನಾರಾಯಣರಾವ ಭಿಡೆ ಇವರೇ ಮೊದಲಾದವರು ಇದ್ದರು. ಬಂಧಿತರಾದ ಕೆಲಜನ ಮುಸಲ್ಮಾನ ಬಂಧುಗಳೂ ಇದ್ದರು. ಇವರೆಲ್ಲರ ಮೇಲೂ ಮೊಕದ್ದಮೆ ನಡೆಯಿತು. ಆಗ ದಕ್ಷಿಣ ಭಾಗದ ಕಮಿಶನರ್ ಮತ್ತು ಮುಂಬಯಿ ಸರಕಾರದ ಹೋಂ ಮೆಂಬರ್ ಧಾರವಾಡಕ್ಕೆ ಬಂದು ವಿಚಾರಣೆ ಮಾಡಿಕೊಂಡು ಹೋದರು. ಪದ್ಧತಿಯಂತೆ ಮ್ಯಾಜಿಸ್ಟ್ರೇಟರ ಮುಂದೆ ವಿಚಾರಣೆ ಆಗಿ ಮೊಕದ್ದಮೆ ಸೆಷನ್ ಕೋರ್ಟಿಗೆ ಕಮಿಟ್ ಮಾಡಲಾಯಿತು. ಆರೋಪಿಗಳು, ಗಾಂಧೀಜಿ ತತ್ವಕ್ಕೆ ಅನುಗುಣವಾಗಿ, ಮೊಕದ್ದಮೆಯಲ್ಲಿ ಭಾಗವಹಿಸಲು ನಿರಾಕರಿಸಿದರು. ಅವರು ಕೇವಲ ತಮ್ಮ ಹೇಳಿಕೆ ಕೊಡುವುದಕ್ಕಿಂತ ಹೆಚ್ಚಿನದೇನನ್ನೂ ಮಾಡಲಿಲ್ಲ.

ಮುಂಬಯಿ ಎ.ಐ.ಸಿ.ಸಿ. ಸಭೆಯಲ್ಲಿ ಧಾರವಾಡ ಗೋಲಿಬಾರ್ ಪ್ರಶ್ನೆ ಬಂದು ಕಾಂಗ್ರೆಸ್ ಪರವಾಗಿ ಈ ಪ್ರಕರಣದ ವಿಚಾರಣೆ ನಡೆಯಬೇಕೆಂದು ನಿರ್ಣಯವಾಯಿತು. ಅದರಂತೆ ಅಬ್ಬಾಸ್ ತಯ್ಯಬ್‌ಜಿ ಅವರ ನೇತೃತ್ವದಲ್ಲಿ ಒಂದು ವಿಚಾರಣಾ ಸಮಿತಿ ಏರ್ಪಟ್ಟಿತು. ಮುಖಂಡರು ಯಾರಾದರೂ ಧಾರವಾಡಕ್ಕೆ ಹೋಗಿ ಬಂಧನದಲ್ಲಿದ್ದ ಆರೋಪಿಗಳನ್ನು ಕಂಡುಬಂದರೆ, ಅವರಿಗೆಲ್ಲ ಸಮಾಧಾನವಾಗುವುದೆಂದು ಗಾಂಧೀಜಿ ಹೇಳಿದ್ದರಿಂದ ಲಾಲಾ ಲಜಪತರಾಯ ಮತ್ತು ಶೌಕತ್ ಆಲಿ ಧಾರವಾಡಕ್ಕೆ ಬಂದರು. ಇವರ ಸಂಗಡ ದೇಶಪಾಂಡೆ ಗಂಗಾಧರ ರಾಯರು ಸಹ ಇದ್ದರು. ಲಾಲಾಜಿ ಮತ್ತು ಶೌಕತ್ ಆಲಿ ಅವರು ಆರೋಪಿಗಳ ಸಂಗಡ ಮಾತನಾಡಬಾರದೆಂಬ ಕರಾರಿನ ಮೇಲೆ ಅವರಿಗೆ ಗೋಲಿಬಾರ್ ಪ್ರಕರಣದ ರಾಜಕೀಯ ಆರೋಪಿಗಳನ್ನು ಕಾಣಲು ಅನುಮತಿ ದೊರೆತಿತ್ತು. ಇದರಿಂದ ಆರೋಪಿಗಳಿಗೆಲ್ಲ ಸಮಾಧಾನ ಆಯಿತು. ಸೆಷನ್ಸ್ ಕೋರ್ಟಿನಲ್ಲಿ ಈ ಮೊಕದ್ದಮೆಯ ತೀರ್ಮಾನ ಹೊರಬಿದ್ದು ದಿವಾಕರ, ಗೋಪಾಳರಾವ ದೇಶಪಾಂಡೆ, ಕೃಷ್ಣರಾವ ಮುದವೇಡಕರ, ಹನುಮಂತರಾವ ದೇಸಾಯಿ ಇವರು ದೋಷಮುಕ್ತರಾದರು. ಉಳಿದವರಿಗೆ ಒಂದು ವರ್ಷದಿಂದ ಮೂರು ವರ್ಷಗಳವರೆಗೆ ಸಶ್ರಮ ಶಿಕ್ಷೆ ಆಯಿತು. ಆಗ ಶ್ರೀ ವಿನಾಯಕರಾವ ಜೋಶಿ ಅವರ ನಿವೃತ್ತಿ ವೇತನವನ್ನು ಸರಕಾರ ನಿಲ್ಲಿಸಿಬಿಟ್ಟಿತು. ಇನ್ನು ಕಾಂಗ್ರೆಸ್ ನೇಮಿಸಿದ್ದ ವಿಚಾರಣಾ ಸಮಿತಿಯು ಸಾಕ್ಷ್ಯ ತೆಗೆದುಕೊಂಡು ಗೋಲಿಬಾರ್ ಮಾಡಲು ಏನೂ ಕಾರಣ ಇರಲಿಲ್ಲ ಎಂದು ವರದಿ ಮಾಡಿತು.

ಈ ಗೋಲಿಬಾರ್ ಪ್ರಕರಣದ ಸಂಬಂಧದಲ್ಲಿ ಗಾಂಧೀಜಿ 14-7-1921ರಲ್ಲಿ ಒಂದು ಸಂದೇಶ ಕಳಿಸಿದ್ದು ಅದು ಹೀಗಿದೆ: ಧಾರವಾಡದಲ್ಲಿ ಸರಕಾರ ಮಾಡುತ್ತಿರುವ ಕೆಲಸವನ್ನು ಅತ್ಯಂತ ಆಸಕ್ತಿಯಿಂದ ನಾನು ಗಮನಿಸುತ್ತಿದ್ದೇನೆ. ಸರಕಾರದ ದಬ್ಬಾಳಿಕೆಗೆ ಗುರಿಯಾದವರ ಬಳಗದವರಿಗೆ ನನ್ನ ಅಭಿನಂದನೆಗಳು. ಒಟ್ಟಿನಲ್ಲಿ ಜನತೆಯನ್ನೇ ನಾನು ಅಭಿನಂದಿಸುತ್ತೇನೆ. ಅವರ ಧೈರ್ಯ ಸ್ಥೈರ್ಯ ಸಹನೆಗಳಿಗೆ ಅಭಿನಂದಿಸುತ್ತೇನೆ. ಅಲ್ಲಿ ದಸ್ತಗಿರಿಗಳಿಂದ ಧಾರವಾಡದ ಜನರ ನೀತಿ ಸ್ವಲ್ಪವೂ ಕೆಡಲಿಲ್ಲವೆಂದು ಕೇಳಿ ನನಗೆ ಸಂತೋಷವಾಗಿದೆ. ಧಾರವಾಡದಲ್ಲಿ ನಡೆದ ಘಟನೆಯಂಥ ಘಟನೆಗಳಿಂದ ಸ್ವರಾಜ್ಯಕ್ಕೆ ನಮ್ಮ ದಾರಿ ಹತ್ತಿರವಾಗುತ್ತದೆ. ನಮ್ಮ ಕೂಚು (ಮಾರ್ಚ್) ಶೀಘ್ರ ಆಗುತ್ತದೆ. ಆದರೆ ಅಹಿಂಸೆಯನ್ನೂ ಸಹನೆಯನ್ನೂ ನಾವು ಕಾಯ್ದುಕೊಳ್ಳಬೇಕು. ಉದ್ದೇಶಪೂರ್ವಕ ಮಾಡಿದ ಪ್ರತಿಭಟನೆ ಜನರ ಧೈರ್ಯವನ್ನೂ ಇಮ್ಮಡಿಗೊಳಿಸುತ್ತದೆ. ಅವರ ಚಳವಳಿಗೆ ಹೆಚ್ಚು ಪವಿತ್ರತೆಯನ್ನು ತರುತ್ತದೆ. ಆಧ್ದರಿಂದ ಸರಕಾರದ ದಬ್ಬಾಳಿಕೆ ಎಷ್ಟೇ ಆದರೂ ನಾವು ಸಹಿಸಿಕೊಂಡು ಧೈರ್ಯಗೆಡದೆ ನಮ್ಮ ಗುರಿಯ ಕಡೆ ಸಾಗಿ ಹೋಗಬೇಕು.

ಮುಂದುವರಿಯುವುದು....



ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರು

ಇಂದಿರಾ ಕೃಷ್ಣಪ್ಪ,

(ಹಿಂದಿನ ಸಂಚಿಕೆಯಿಂದ ಮುಂದುವರೆದ ಭಾಗ)

ಶಕುಂತಲಾ ಕುರ್ತಕೋಟಿ

ಸ್ವಾತಂತ್ರ್ಯಹೋರಾಟಗಾರರ ಕುಟುಂಬದಲ್ಲಿಯೇ ಜನಿಸಿದ ಶಕುಂತಲಾ ಅವರು ವಿದ್ಯಾರ್ಥಿಯಾಗಿದ್ದಾಗಿನಿಂದಲೂ ಸತ್ಯಾಗ್ರಹ, ಧರಣಿ ಉಗ್ರ ಹೋರಾಟಗಳಲ್ಲಿ ಭಾಗಿಯಾದವರಾಗಿದ್ದಾರೆ. ಮನೆಗೆ ಬರುತ್ತಿದ್ದ ಗಾಂಧಿ ಅವರ ಹರಿಜನ ಪತ್ರಿಕೆ, ತಿಲಕರ ಕೇಸರಿ ಪತ್ರಿಕೆಗಳನ್ನು ಓದುತ್ತಾ, ಹಿರಿಯರ ಇಚ್ಛೆಯಂತೆ ಟಳಕವಾಡದ ಬಾಲಿಕಾ ಆದರ್ಶ ವಿದ್ಯಾಲಯದಲ್ಲಿ ಶಿಕ್ಷಣ ಪಡೆದರು. ಬೆಳಗಾವಿಯ 1941ರ ಹೋರಾಟದಲ್ಲಿ ಭಾಗಿಯಾಗುತ್ತ, ಬಾಲಕಿಯರ ಸೇವಾದಲ ಸಂಘಟನೆಯ ನಾಯಕಿಯಾದರು. ವಿದ್ಯಾರ್ಥಿಗಳ ಫಿಕೆಟಿಂಗ್, ಬಂದ್, ಮೆರವಣಿಗೆಯ ನಾಯಕತ್ವ ವಹಿಸಿದರು. ಗಾಂಧಿ, ನೆಹರು, ರಂಗನಾಥ ದಿವಾಕರ, ವಡವಿ, ಅಚ್ಯುತ ಪಟವರ್ಧನ್ ಮತ್ತು ಗಂಗಾಧರ ದೇಶಪಾಂಡೆ ಅವರ ಸಂಪರ್ಕ ಮತ್ತು ಮೆಚ್ಚುಗೆ ಗಳಿಸಿದರು. ಬೆಳಗಾವಿಯ ಬೃಹತ್ ಮೆರವಣಿಗೆಯ ಸಂದರ್ಭದಲ್ಲಿ ಸಶಸ್ತ್ರ ಪೋಲೀಸರು ಇವರನ್ನು ದಸ್ತಗಿರಿ ಮಾಡಿದರು. ಬಿಡುಗಡೆಯ ನಂತರ ಭೂಗತರಾಗಿದ್ದ ಇವರು ಪತ್ರಿಕೆ, ಕರಪತ್ರ ಮತ್ತು ಕಾಗದ ಪತ್ರಗಳ ರವಾನೆಯ ಕೆಲಸ ನಿರ್ವಹಿಸಿದರು. ಭೂಗತರಾಗಿದ್ದು ಸಾಕಷ್ಟು ಕೆಲಸ ಸಾಧ್ಯವಿಲ್ಲವೆಂದು ಮನಗಂಡು ಹೊರಬಂದರು, ತದನಂತರದಲ್ಲಿ ಟಳಕವಾಡ, ಬೆಳಗಾವಿಯಲ್ಲಿ ವಿದ್ಯಾರ್ಥಿ ವಿದ್ಯಾರ್ಥಿನಿಯರ ಮೆರವಣಿಗೆಯನ್ನು ಸಂಘಟಿಸಿ ಚರ್ಚಿಲ್‌ರ ಪ್ರತಿಮೆ ದಹನದಂತಹ ತೀವ್ರ ಕಾರ್ಯದಲ್ಲಿ ತೊಡಗಿದರು. ಸಾವಿರಾರು ಸಂಖ್ಯೆಯ ವಿದ್ಯಾರ್ಥಿ ವೃಂದವನ್ನು ಸೆರೆಮನೆಯಲ್ಲಿಡಲಾಯಿತು. ಶಕುಂತಲಾ ಅವರನ್ನೂ 'ಅಂಡರ್ ಟ್ರಯಲ್ ಖೈದಿ' ಎಂದು ಐದೂವರೆ ತಿಂಗಳು ಸೆರೆಯಲ್ಲಿರಿಸಿದರು. ಕುರ್ತಕೋಟಿ ಅವರ ಉಗ್ರ ಹೋರಾಟದಿಂದ ಆಕರ್ಷಿತರಾಗಿ ಇಚ್ಛೆಪಟ್ಟು ಅವರನ್ನೇ ವಿವಾಹವಾದರು. 1944ರಲ್ಲಿ ಇವರ ವಿವಾಹ ಸುದ್ದಿ ತಿಳಿದು ಕುರ್ತಕೋಟಿ ಅವರನ್ನು ಹುಡುಕಿಕೊಟ್ಟವರಿಗೆ ಸರ್ಕಾರ ಸಾವಿರ ರೂಪಾಯಿ ಬಹುಮಾನ ಘೋಷಿಸಿತು. ಮತ್ತು ಅವರ ಹುಡುಕಾಟ ತೀವ್ರಗೊಂಡಿತ್ತು. ಬೆಳಗಾವಿಯಲ್ಲಿ ಅವರನ್ನು ಬಂಧಿಸಿ ಸೆರೆಮನೆಗೆ ತಳ್ಳಿದರು.ಸ್ವಾತಂತ್ರ್ಯ ನಂತರ ಗಾಂಧೀಜಿ ಅವರ ರಚನಾತ್ಮಕ ಕಾರ್ಯಗಳಲ್ಲಿ ತೊಡಗಿ ಶಕುಂತಲಾ ಅವರು ಧಾರವಾಡ ಗಾಂಧಿ ಪ್ರತಿಷ್ಠಾನದಲ್ಲಿ ಸೇವೆ ಮತ್ತು ಗಾಂಧಿ ವಿಚಾರ ಪ್ರಚಾರದಲ್ಲಿ ತೊಡಗಿದರು. ಜಯಪ್ರಭಾ ಎಂಬ ಮಕ್ಕಳ ಕೂಟ ಕಟ್ಟಿ, ಮಕ್ಕಳ ಅಭಿವೃದ್ಧಿ ಕಾರ್ಯದಲ್ಲಿ ನಿರತರಾದರು.

ರಮಾಬಾಯಿ ಜೀವನರಾವ್ ಯಾಳಗಿ

"ಸ್ವಾತಂತ್ರ್ಯ ಹೋರಾಟದ ಕುಟುಂಬ"ವೆಂದೇ ಹೆಸರಾದ ಯಾಳಗಿ ಕುಟುಂಬದ ಸದಸ್ಯೆ ರಮಾಬಾಯಿಯವರಾಗಿದ್ದಾರೆ. ಗಾಂಧೀಜಿ ಅವರ ದಂಡಿ ಯಾತ್ರೆಯಿಂದ ಪ್ರೇರಣೆಗೊಂಡು, ಬೆಳಗಾವಿಯಲ್ಲಿ 1930ರ ಏಪ್ರಿಲ್ ಆರರಂದು ಅದೇ ಮಾದರಿ ಉಪ್ಪಿನ ಸತ್ಯಾಗ್ರಹ ಆರಂಭಿಸಿದ ತಕ್ಷಣ ಜೀವನರಾವ್ ಅವರನ್ನು ಪೋಲೀಸರು ಬಂಧಿಸಿದರು. ಎದೆಗುಂದದ ರಮಾಬಾಯಿ ಸತ್ಯಾಗ್ರಹದ ನೇತೃತ್ವ ವಹಿಸಿದರು. ತದನಂತರದಲ್ಲಿ 1931ರಲ್ಲಿ ಯರವಾಡ ಜೈಲಿನಲ್ಲಿದ್ದ ಮಲ್ಲಪ್ಪ ಧನಶೆಟ್ಟಿ, ಕೃಷ್ಣ ಸಾರಡಾ, ಕುರ್ಬಾನ್ ಹುಸೇನ್ ಮತ್ತು ಜಗನ್ನಾಥ ಶಿಂಧೆಯನ್ನು ಗಲ್ಲಿಗೇರಿಸಿದಾಗ, ಬ್ರಿಟಿಷರ ವಿರುದ್ಧ ಹತ್ತು ಸಾವಿರ ಜನರ ಪ್ರತಿಭಟನಾ ಮೆರವಣಿಗೆಯನ್ನು ದಂಪತಿಗಳು ಆಯೋಜಿಸಿದ್ದರು. ಪೋಲೀಸರ ಲಾಠಿ ಪ್ರಹಾರದಿಂದ ತೀವ್ರ ಗಾಯಗಳಿಗೆ ತುತ್ತಾದರೂ ರಮಾಬಾಯಿ ಅವರು ಚಳುವಳಿಗಾರರಿಗೆ ಧೈರ್ಯ ತುಂಬಿ ಮುನ್ನಡೆಸಿದರು. ಮಹಾತ್ಮಾಜಿ ಅವರ 1932ರ ಬೆಳಗಾವಿ ಭೇಟಿಯ ಸಂದರ್ಭದಲ್ಲಿ ಯಾಳಗಿ ಅವರ ಮನೆಗೆ ಬಂದು ದಂಪತಿಗಳಿಗೆ ಹರಸಿ, ಚಳುವಳಿಗಳನ್ನು ಮುಂದುವರೆಸಲು ಕರೆ ನೀಡಿದರು. ಮಹಿಳಾ ಸಂಘಟನೆ, ಗ್ರಾಮೀಣ ಮಹಿಳೆಯರಿಗೆ ಪ್ರೋತ್ಸಾಹದೊಂದಿಗೆ, 1941ರಲ್ಲಿ ನಡೆಸಿದ ಸತ್ಯಾಗ್ರಹದಲ್ಲಿ ರಮಾಬಾಯಿ ಅವರಿಗೆ ಆರು ತಿಂಗಳ ಕಾಲ ಜೈಲುವಾಸವಾಯಿತು. 1942ರ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ದೊಡ್ಡ ಮಹಿಳಾ ಪಡೆಯೇ ಪಾಲ್ಗೊಳ್ಳುವಂತೆ ಶ್ರಮಿಸಿದ, ಬ್ರಿಟಿಷರ ವಿರುದ್ಧ ಭಾಷಣ ಮಾಡಿದ್ದಕ್ಕಾಗಿ ರಮಾಬಾಯಿ ಅವರಿಗೆ ಪುನಃ ಒಂದೂವರೆ ವರ್ಷ ಸೆರೆಮನೆ ವಾಸವಾಯಿತು.


ಮುಂದುವರಿಯುವುದು...


“ಬೆಂಕಿಯಲ್ಲಿ ಬೆಂದ ಬಂಗಾರ – ಬಾಬೂಜಿ”

– ರುದ್ರಪ್ಪ ಹನಗವಾಡಿ



ಬಾಬೂಜಿ ಎಂಬ ಉನ್ನತ ಗೌರವ ವ್ಯಕ್ತಿತ್ವದ, “ಬೆಂಕಿಯಲ್ಲಿ ಬೆಂದ ಬಂಗಾರ”ವೆಂದು ರಾಷ್ಟ್ರಪತಿ ಡಾ. ರಾಜೇಂದ್ರ ಪ್ರಸಾದ್ ಅವರ ಪ್ರಶಂಸೆಗೆ ಪಾತ್ರರಾದ ಹಸಿರು ಕ್ರಾಂತಿಯ ಹರಿಕಾರ, ಗಾಂಧಿ ಅನುಯಾಯಿ, ದಕ್ಷತೆಯ ಉತ್ತುಂಗ ರಾಜಕಾರಣಿ, ಉಪ ಪ್ರಧಾನಮಂತ್ರಿ ಬಾಬು ಜಗಜೀವನರಾಂ. ಅಸ್ಪೃಶ್ಯತೆ ನಿವಾರಣಾ ಹೋರಾಟದ ಮಹಾನ್ ನಾಯಕ, ನವಭಾರತ ನಿರ್ಮಾಪಕರಲ್ಲಿ ಪ್ರಮುಖರಾಗಿದ್ದಾರೆ. ಸಂತ ರವಿದಾಸರ ಕರೆಗೆ ಓಗೊಟ್ಟು, ಗಾಂಧೀಜಿ ಅವರ ಸತ್ಯ, ಅಹಿಂಸೆ ದೀಕ್ಷೆಗೆ ಕೈಜೋಡಿಸುತ್ತಾ, ಆರು ದಶಕಗಳ ಕಾಲ ಭಾರತದ ಸಾಮಾಜಿಕ, ಆರ್ಥಿಕ ರಾಜಕೀಯ ಪರಿವರ್ತನೆಗೆ ಕಾರಣರಾದ ಬಾಬೂಜಿ ವಿಮೋಚನಾ ಚಳುವಳಿಯ ರೂವಾರಿಗಳಾಗಿದ್ದಾರೆ. ಭಾರತೀಯ ಸಮಾಜದ ಕ್ರೂರ ಜಾತೀಯತೆ, ಅಸ್ಪೃಶ್ಯತೆಯ ಕಬಂಧ ಬಾಹುಗಳ ಅನೇಕ ಹಿಂಸೆಗಳಿಂದ ಹೊರಬಂದು, ಅದರ ವಿರುದ್ಧ ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಮತ್ತು ಕಾನೂನಾತ್ಮಕವಾಗಿ ಯುವಕ ರಾಂ 1926ರಿಂದಲೇ ಸಮರವನ್ನೇ ಸಾರಿದ್ದರು. 1936ರಲ್ಲಿ ಬಿಹಾರ ವಿಧಾನಪರಿಷತ್ ಸದಸ್ಯತ್ವದಿಂದ ಆರಂಭವಾಗುವ ಅವರ ಅಧಿಕಾರ ರಾಜಕಾರಣದ ಅವಧಿ 1986 ಜುಲೈ 6ರ ಅಂತಿಮ ದಿನದವರೆಗೆ, ಕಾರ್ಮಿಕರು, ರೈತರು, ದಲಿತರು, ಮಹಿಳೆಯರು ಹಾಗೂ ಬುಡಕಟ್ಟು ಜನರ ಅಭಿವೃದ್ಧಿಗಾಗಿ, ಹಲವಾರು ಯೋಜನೆಗಳು, ಸೌಲಭ್ಯಗಳು, ಕಾರ್ಯಕ್ರಮಗಳನ್ನು ರೂಪಿಸಿದವರಾಗಿದ್ದಾರೆ. 1952ರಲ್ಲಿ ಸಾರಿಗೆ ಮತ್ತು ಸಂಪರ್ಕ ಸಚಿವರಾಗಿ ವಿಮಾನಯಾನ ರಾಷ್ಟ್ರೀಕರಣ, ಇಂಡಿಯನ್ ಏರ್‌ಲೈನ್ಸ್ ಕಾರ್ಪೋರೇಶನ್, ಏರ್ ಇಂಡಿಯಾ ನಿಗಮ ಸ್ಥಾಪಿಸಿದರು. ಭಾರತದ ಅಂಚೆ ವ್ಯವಸ್ಥೆಯನ್ನು ಗ್ರಾಮ ಮಟ್ಟದವರೆಗೂ ವಿಸ್ತರಿಸಿದರು. 1956 ರಿಂದ 1962ರವರೆಗೆ ರೈಲ್ವೆ ಸಚಿವರಾಗಿ, ರೈಲು ವ್ಯವಸ್ಥೆ ನವೀಕರಣ, ರೈಲ್ವೇ ಕಾರ್ಮಿಕರ ಕಲ್ಯಾಣ ಸೌಕರ್ಯಗಳು, ರೈಲ್ವೆಯಲ್ಲಿನ ದಲಿತ ನೌಕರರ ಮುಂಬಡ್ತಿಯಲ್ಲಿ ಮೀಸಲಾತಿ ಕ್ರಮವನ್ನು ಜಾರಿಗೊಳಿಸಿದರು. 1967ರಲ್ಲಿ ಕೃಷಿ ಸಚಿವರಾಗಿದ್ದಾಗ ದೇಶದ ಭೀಕರ ಬರಗಾಲವನ್ನೆದುರಿಸಲು ಆಹಾರ ಸ್ವಾವಲಂಬನೆಗಾಗಿ, ‘ಹಸಿರು ಕ್ರಾಂತಿ’ಯನ್ನು ತಂದರು. 1970 ರಿಂದ 74ರವರೆಗೆ ರಕ್ಷಣಾ ಸಚಿವರಾಗಿದ್ದಾಗ ಅವರ ಕಾರ್ಯಗಳು ಚಿರಸ್ಮರಣೀಯವಾಗಿವೆ. ವಿಶ್ವದ ಭೂನಕ್ಷೆಯಲ್ಲಿ ‘ಬಾಂಗ್ಲಾ ದೇಶದ’ ಉದಯಕ್ಕೆ ಕಾರಣವಾದ ಭಾರತ – ಪಾಕಿಸ್ತಾನ ಯುದ್ಧದ ಬಿಕ್ಕಟ್ಟನ್ನು ಸವಾಲಾಗಿ ಸ್ವೀಕರಿಸಿ ನಿಭಾಯಿಸಿದ ದಕ್ಷತೆ ಇಂದಿಗೂ ಅನುಕರಣೀಯ. 1971ರ ಭಾರತ – ಪಾಕಿಸ್ತಾನ ಯುದ್ಧವು ಭಾರತದ ಆಧುನಿಕ ರಕ್ಷಣಾ ಕಾರ್ಯದ ದ್ಯೋತಕವಾಗಿತ್ತು. ದೇಶದಲ್ಲಿ ಹೇರಿದ್ದ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ “ದೇಶದ ಪ್ರಜಾಪ್ರಭುತ್ವದ ಉಳಿವೇ” ಪ್ರಧಾನವೆಂದು ಪರಿಗಣಿಸಿದ ಜಗಜೀವನರಾಂ ಅವರು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿ ಹೊರಬಂದವರಾಗಿದ್ದಾರೆ. ನಂತರದಲ್ಲಿ ಜನತಾ ಸರ್ಕಾರ ರಚಿಸಲು ಕಟಿಬದ್ಧರಾಗಿ ದೇಶದ ಪ್ರಧಾನಮಂತ್ರಿ ಆಗುವ ಅವಕಾಶದಿಂದ ವಂಚಿತರಾದರೂ, ಜವಾಬ್ದಾರಿಯುತ ಉಪ ಪ್ರಧಾನಿಯಾಗಿ ಕರ್ತವ್ಯ ನಿರ್ವಹಿಸಿದರು. ಸ್ವಾತಂತ್ರ್ಯ ಪೂರ್ವದಲ್ಲಿ 1934ರ ಬಿಹಾರ ಭೂಕಂಪ ಪ್ರದೇಶದಲ್ಲಿ ಸ್ವಯಂ ಸೇವಕರಾಗಿ ದುಡಿದರು. 1938ರ 2ನೇ ಮಹಾಯುದ್ಧದ ಸಂದರ್ಭದಲ್ಲಿ ಬಿಹಾರ ವಿಧಾನಸಭೆಗೆ ರಾಜೀನಾಮೆ ಸಲ್ಲಿಸಿದರು. 1940ರಲ್ಲಿ ಗಾಂಧೀಜಿ ಅವರ ಕರೆಯ ಮೇರೆಗೆ ಅಸಹಕಾರ ಚಳುವಳಿ, 1942ರ ಭಾರತ ಬಿಟ್ಟು ತೊಲಗಿ ಆಂದೋಲನದಲ್ಲಿ ಭಾಗಿಯಾದರು. 1946ರಲ್ಲಿ ಕ್ಯಾಬಿನೆಟ್ ಮಿಷನ್‌ನ ಮುಂದೆ, ದಲಿತರ ಹಕ್ಕುಗಳ ಮಂಡನೆ, ನಂತರದಲ್ಲಿ ಮಧ್ಯಂತರ ಸರ್ಕಾರದಲ್ಲಿ ಕಾರ್ಮಿಕ ಮಂತ್ರಿಯಾಗಿ ಸೇವೆ ಸಲ್ಲಿಸಿದ್ದಾರೆ. 1946 ರಿಂದ 1986ರ ವರೆಗಿನ ಅವರ ಸುದೀರ್ಘ ಭಾರತದ ರಾಜಕೀಯ ಇತಿಹಾಸದ ನಡೆ, ಭಾರತೀಯ ಸಾಮಾಜಿಕ ಚರಿತ್ರೆಯನ್ನು ಪ್ರತಿನಿಧಿಸುತ್ತದೆ. ದಣಿವಿಲ್ಲದ ಹೋರಾಟಗಾರನ ಸಮಾನತಾ ಸಮಾಜದ ಆಶಯ ನಮ್ಮೆಲ್ಲರ ಆದರ್ಶವಾಗಿದೆ.











ಸಮಾಧಾನ ಚಿತ್ತರಾಗಿರಿ (ನೆಮ್ಮದಿ ಮನಸ್ಸು - ಜೀವನದ ಯಶಸ್ಸು)

ಡಾ. ಸಿ.ಆರ್. ಚಂದ್ರಶೇಖರ್

ಓ ಮನಸೇ.....

ಮನಸ್ಸೇ, ನೀನು ಯಾರು?

ಆಲೋಚಿಸುವ, ಭಾವನೆಗಳನ್ನು ತೋರುವ, ನಿಮ್ಮ ವರ್ತನೆಗಳನ್ನು ನಿಯಂತ್ರಿಸಲು, ಯಾವುದೇ ಹೊಸ ವಿಚಾರ-ಕೌಶಲಗಳನ್ನು ಕಲಿಯುವ, ನಿಮ್ಮ ನೈತಿಕ ಮೌಲ್ಯಗಳನ್ನು ನಿರ್ಧರಿಸಿ-ಪಾಲಿಸಿ, ನಿಮ್ಮ ಜೀವನಶೈಲಿಯನ್ನು ರೂಪಿಸುವ, ನಿಮ್ಮ ಗುರಿ ಏನಾಗಿರಬೇಕೆಂದು ನಿರ್ಧರಿಸಿದೆ, ನಿಮ್ಮ ವ್ಯಕ್ತಿತ್ವ ಹೇಗಿರಬೇಕೆಂದು ಹೇಳಿ ನಾನೇ 'ಮನಸ್ಸು'.

ನೀನೆಲ್ಲಿದ್ದೀಯೆ, ನಿನ್ನನ್ನು ಕಾಣಬೇಕಲ್ಲ?

ನಾನು ಮಿದುಳಿನಲ್ಲಿದ್ದೇನೆ. ಸಕ್ಕರೆಯೊಳಗಿನ ಸಿಹಿಯನ್ನು ಹೂವಿನೊಳಗೆ ಪರಿಮಳವನ್ನು, ನಾದದೊಳಗಿನ ಮಾಧುರ್ಯವನ್ನು ಹೇಗೆ ನೇರವಾಗಿ ನೋಡಲು ಸಾಧ್ಯವಿಲ್ಲವೋ, ಹಾಗೆ ನನ್ನನ್ನು ನೀವು ನೋಡಲಾರಿರಿ. ಸಿಹಿ, ಪರಿಮಳ, ಮಾಧುರ್ಯವನ್ನು ಅನುಭವಿಸಿ ತಿಳಿಯುವಂತೆ, ನನ್ನನ್ನು ನೀವು ಅನುಭವಿಸಿ ತಿಳಿಯಬಲ್ಲಿರಿ.

ನೀನು ಹೇಗೆ ಬೆಳೆಯುತ್ತೀಯ? ಆಗತಾನೆ ಹುಟ್ಟಿದ ಮಗುವಿನಲ್ಲಿ ನೀನು ಇರುತ್ತೀಯಾ?

ಖಂಡಿತವಾಗಿಯೂ ಆಗತಾನೆ ಹುಟ್ಟಿದ ಮಗುವಿನಲ್ಲೇಕೆ, ತಾಯಿಯ ಗರ್ಭದಲ್ಲಿರುವ ಶಿಶುವಿನಲ್ಲಿ ಇರುತ್ತೇನೆ. ಆದರೆ ತೀರಾ ಶೈಶಾವಸ್ಥೆಯಲ್ಲಿರುತ್ತೇನೆ. ಆಗ ನಾನು ಆಲೋಚಿಸಲಾರೆ, ಹಿತ-ಅಹಿತ ಬಿಟ್ಟರೆ ಮತ್ತೇನೂ ನನಗೆ ಗೊತ್ತಾಗುವುದಿಲ್ಲ. ಅಹಿತವಾದಾಗ ಅತ್ತು, ಕೈಕಾಲು ಬಡಿದು ಸಹಾಯಕ್ಕಾಗಿ ಯಾಚಿಸುತ್ತೇನೆ, ತಂದೆ-ತಾಯಿ ಯಾರು? ಸುತ್ತಮುತ್ತಲಿನ ವಸ್ತುಗಳೇನು? ಒಂದೂ ನನಗೆ ತಿಳಿಯುವುದಿಲ್ಲ, ಮಗು ತಾಯಿಯಿಂದ ಹೊರಬಂದ ಮೇಲೆ ಆದರೆ ಕಣ್ಣು, ಕಿವಿ, ಚರ್ಮ, ನಾಲಿಗೆ, ಮೂಗು ಕೆಲಸ ಮಾಡಲಾರಂಭಿಸಿದ ಮೇಲೆ ನಾನು ಬೆಳೆಯತೊಡಗುತ್ತೇನೆ.

ಹೊಟ್ಟೆ ತುಂಬಿದಾಗ, ಇತರರು ಮಗುವನ್ನು ಮುದ್ದಿಸಿದಾಗ ನಗಲು ಕಲಿಯುತ್ತೇನೆ. ಸುತ್ತಮುತ್ತ ಬೇಕಾಗುವ ವಸ್ತುಗಳನ್ನು ಜನರನ್ನು ಗುರುತಿಸಲು ತೊಡಗುತ್ತೇನೆ. ಯಾವಾಗ ಏನು ಮಾಡಬೇಕೆಂದು ಕಲಿಯುತ್ತೇನೆ. ಆಲೋಚಿಸಲು, ಸಮಸ್ಯೆಯನ್ನು ಪರಿಹರಿಸಲು, ಹೊಸ ಹೊಸ ವಿಚಾರವನ್ನು ಕಲಿಯುತ್ತೇನೆ. ಈ ಸಾಮರ್ಥ್ಯ ನನಗೆ ನಿಧಾನವಾಗಿ, ಹಂತಹಂತವಾಗಿ ಬರತೊಡಗುತ್ತದೆ. ಮಾತೃಭಾಷೆ, ಇತರ ಭಾಷೆಗಳು, ಬರಹ, ಸಂವಹನವನ್ನು ರೂಪಿಸಿಕೊಳ್ಳುತ್ತೇನೆ.

ನೀನು ಎಷ್ಟನೇ ವಯಸ್ಸಿನವರೆಗೆ ಬೆಳೆಯುತ್ತೀಯಾ?

ಸಾಮಾನ್ಯವಾಗಿ ನನ್ನ ಬೆಳವಣಿಗೆ ಇಪ್ಪತ್ತು ವರ್ಷ ವಯಸ್ಸಿನವರೆಗೆ ನಡೆಯುತ್ತದೆ. ಬೌದ್ಧಿಕ ಮತ್ತು ವ್ಯಕ್ತಿತ್ವ ವಿಕಾಸ ಈ ಅವಧಿಯಲ್ಲೇ ಪೂರ್ಣಗೊಳ್ಳುತ್ತದೆ.

ನಿನ್ನ ಬೆಳವಣಿಗೆಗೆ ಮುಖ್ಯವಾಗಿ ಬೇಕಾದದ್ದೇನು?

ನನ್ನ ಬೆಳವಣಿಗೆಗೆ ಬುನಾದಿ 'ಅನುವಂಶಿಕ ಅಂಶಗಳು', ವಂಶ ಪಾರಂಪರ್ಯವಾಗಿ ಜೀನುಗಳ ಮುಖಾಂತರ ತಂದೆ ತಾಯಿಗಳಿಂದ ಬರುವ ಅಂಶಗಳು ನನ್ನ ಸಾಮರ್ಥ್ಯದ ವ್ಯಾಪ್ತಿಯನ್ನು ನಿರ್ಧರಿಸುತ್ತವೆಯಾದರೆ, ಪರಿಸರದ ಅಂಶಗಳು ನನ್ನ ಬೆಳವಣಿಗೆಗೆ ಅಷ್ಟೇ ಪ್ರೇರಣೆ ಯನ್ನು ನೀಡುತ್ತವೆ.

ಸುತ್ತಮುತ್ತಲಿನ ಜನರ ನಡೆ ನುಡಿಗಳನ್ನು ನಾನು ಬಹಳ ಸೂಕ್ತವಾಗಿ ಗಮನಿಸುತ್ತೇನೆ. ಅವುಗಳನ್ನು ಅನುಕರಿಸುತ್ತೇನೆ. ತಂದೆ-ತಾಯಿ, ಅಣ್ಣ, ಅಕ್ಕಂದಿರು, ಮನೆಯ ಇತರರು, ಅಕ್ಕಪಕ್ಕದವರು ಪ್ರತಿ ಸನ್ನಿವೇಶದಲ್ಲಿ ಏನು ಮಾಡುತ್ತಾರೆ, ಹೇಗೆ ನಡೆದುಕೊಳ್ಳುತ್ತಾರೆ, ಯಾವುದೇ ಪ್ರಚೋದನೆಗೆ ಹೇಗೆ ಪ್ರತಿಕ್ರಿಯಿಸುತ್ತಾರೆ ಎನ್ನುವುದನ್ನು ನೋಡುತ್ತೇನೆ. ನನ್ನ ಯಾವ ನಡೆ ನುಡಿಗೆ, ಕ್ರಿಯೆ ಪ್ರತಿಕ್ರಿಯೆಗೆ ಅಪ್ಪ-ಅಮ್ಮ ಇತರರು ಭೇಷ್ ಎನ್ನುತ್ತಾರೊ, ಬೆನ್ನು ತಟ್ಟುತ್ತಾರೊ ಆ ನಡೆ ನುಡಿಗಳನ್ನು ಉಳಿಸಿಕೊಳ್ಳುತ್ತೇನೆ, ಯಾವ ನಡೆ ನುಡಿಯನ್ನು ಅವರು ಇಷ್ಟಪಡುವುದಿಲ್ಲವೋ, ಕೋಪಗೊಂಡು ಶಿಕ್ಷೆ ಕೊಡುತ್ತಾರೊ ಅವನ್ನು ಮತ್ತೆ ಪ್ರಕಟಿಸುವುದಿಲ್ಲ. ನನಗೆ ಮೊದಮೊದಲು ಯಾವುದು ಸರಿ, ಯಾವುದು ತಪ್ಪು ಗೊತ್ತಾಗುವುದೇ ಇಲ್ಲ.

ದೇಹಕ್ಕೆ ಹಿತ, ಖುಷಿ ಕೊಡುವ ಎಲ್ಲವೂ ಸರಿ ಎಂದು ತಿಳಿದಿರುತ್ತೇನೆ. ಕ್ರಮೇಣ ಹಿತವಾದದ್ದು ಖುಷಿ ಕೊಡುವಂಥದ್ದೆಲ್ಲಾ ಒಳ್ಳೆಯದಲ್ಲ, ಬೇರೆಯವರಿಗೆ ತೊಂದರೆ ಕೊಟ್ಟ ಖುಷಿಪಡುವುದು ಸರಿಯಲ್ಲ ಎಂದು ಅಪ್ಪ ಅಮ್ಮ ಶಿಕ್ಷಕರು ಹೇಳಿಕೊಟ್ಟಾಗ ನಿಧಾನವಾಗಿ, ನನ್ನ ಕ್ರಿಯೆ ಪ್ರತಿಕ್ರಿಯೆಗಳು ಸಾಮಾಜಿಕ-ನೈತಿಕ ಚೌಕಟ್ಟಿನೊಳಗೆ, ಸರಿಯಾಗಿ ಪ್ರೌಢವಾಗಿ ರೂಪಗೊಳ್ಳುತ್ತವೆ. ಇದರಲ್ಲಿ ಶಿಕ್ಷಣದ ಪಾತ್ರ ಬಹಳ ಮುಖ್ಯ. ಒಳ್ಳೆಯ ಶಿಕ್ಷಣದಿಂದ ನಾನು ಪಕ್ವವಾಗುತ್ತೇನೆ. ನನ್ನಲ್ಲಿ ಸಾತ್ವಿಕ ಭಾವನೆಗಳು, ಧೋರಣೆಗಳು ತುಂಬಿಕೊಳ್ಳುತ್ತವೆ. ಶಿಕ್ಷಣ ಇಲ್ಲದಿದ್ದರೆ ಅಥವಾ ಕೆಟ್ಟ ಶಿಕ್ಷಣದಿಂದ ನನ್ನಲ್ಲಿ ತಾಮಸ ಮತ್ತು ರಾಕ್ಷಸ ಗುಣಗಳು ಮನೆ ಮಾಡುತ್ತವೆ. ಆಗ ನನಗೂ ತೊಂದರೆ, ಇತರರಿಗೂ ತೊಂದರೆ.

ಮುಂದುವರಿಯುವುದು....

ಆಯ್ಕೆಯ ಬಡತನ ಅಥವಾ ಸರಳ ಜೀವನ

- ಡಾ. ಎನ್. ಜಗದೀಶ್ ಕೊಪ್ಪ

"ಗಾಂಧೀಜಿ ಅವರ ಸ್ವಗತ" ಕೃತಿಯಿಂದ ಆಯ್ದುಕೊಂಡ ಮುಂದುವರಿದ ಭಾಗ ಹಿಂದಿನ ಸಂಚಿಕೆಯಿಂದ

1931ರಲ್ಲಿ ಲಂಡನ್ ನಗರದಲ್ಲಿ ನಡೆದ ದುಂಡು ಮೇಜಿನ ಸಭೆಗೆ ಹೋದಾಗ ಸ್ಥಳೀಯರೊಂದಿಗೆ ಗಾಂಧಿ ಅವರು ನಡೆಸಿದ ಸಂವಾದದ ಸಂಕ್ಷಿಪ್ತ ರೂಪ ಇದಾಗಿದೆ.

ಸರಳ ಹಾಗೂ ಮಿತವ್ಯಯದ ಜೀವನಕ್ಕೆ ನಿಮ್ಮ ದೇಹ, ಮನಸ್ಸು ಮತ್ತು ನೀವು ಶರಣಾಗತವಾದರೆ ಈ ಜಗತ್ತಿನ ಸಕಲ ಸಂಪನ್ಮೂಲಗಳು ನಿಮ್ಮ ಪಾದದಡಿ ಇರುತ್ತದೆ. ಆದರೆ, ಅದು ನಿಮ್ಮ ಉಪಯೋಗಕ್ಕಾಗಿ ಅಲ್ಲ, ಜಗತ್ತಿನ ಸೇವೆಗಾಗಿ ಎಂಬುದನ್ನು ನೀವು ಮರೆಯಬಾರದು. ಇತ್ತೀಚೆಗೆ ನನ್ನ ಮಿತ್ರರಾದ ಸಿ.ಎಫ್. ಆಂಡ್ರೂಸ್ ರವರು ಬ್ರಿಟನ್ನಿನ ಪ್ರಧಾನಿಯವರು ವರದಿಗಾರರೊಬ್ಬರಿಗೆ ಬರೆದಿದ್ದ ಪತ್ರವೊಂದರ ಮಾಹಿತಿಯನ್ನು ನನ್ನ ಗಮನಕ್ಕೆ ತಂದರು. ಬ್ರಿಟನ್ನಿನ ರೈಲುಗಳ ಮೇಲೆ " ಇಂಗೆಂಡಿನಲ್ಲಿ ತಯಾರಾಗುವ ವಸ್ತುಗಳನ್ನು ಕೊಳ್ಳಿರಿ, ಸಾಧ್ಯವಾದಷ್ಟು ಹೆಚ್ಚು ಹೆಚ್ಚು ಕೊಳ್ಳಿರಿ, ಉದ್ಯೋಗಗಳಿಗೆ ಬ್ರಿಟೀಷ್ ಕಾರ್ಮಿಕರನ್ನು ಮಾತ್ರ ನೇಮಕ ಮಾಡಿಕೊಳ್ಳಿರಿ" ಎಂದು ನೀಡಲಾಗಿದ್ದ ಜಾಹಿರಾತನ್ನು ಪ್ರಧಾನಿಯವರು ಸಮರ್ಥಿಸಿಕೊಂಡಿದ್ದರು. ಉದ್ಯೋಗ ಸೃಷ್ಟಿಗೆ ಕೈಗೊಳ್ಳುವ ಯೋಜನೆಗಳಲ್ಲಿ ಇದೂ ಸಹ ಒಂದು ಎಂಬುದನ್ನು ನಾನು ಬಲ್ಲೆ ಆದರೆ, ಇದು ತಾತ್ಕಾಲಿಕ ಪರಿಹಾರವೇ ಹೊರತು ಶಾಶ್ವತವಾದುದಲ್ಲ. ಇದಕ್ಕೆ ನನ್ನ ಸಲಹೆ ಏನೆಂದರೆ, ಇಂತಹ ಯಾತನಾಮಯ ಸಮಸ್ಯೆಗಳನ್ನು ನಿವಾರಿಸಿಕೊಳ್ಳಲು ಆಯ್ಕೆಯ ಬಡತನ ಅಥವಾ ಸರಳವಾದ ಜೀವನ ಸೂಕ್ತವಾದ ಉಪಾಯ ಅಥವಾ ಪರಿಹಾರ. ತೊಂದರೆಯಿಂದ ಹೊರಬರುವ ಇಂತಹ ಕ್ರಮ ಅಥವಾ ಜೀವನದಲ್ಲಿ ನೀವು ಸಮಸ್ಯೆಗಳ ಮೇಲೆ ಸವಾರಿ ಮಾಡುವ ಶಕ್ತಿಯನ್ನು ಪಡೆಯುತ್ತೀರಿ ಹೊರತು ಬೇರೆ ಏನನ್ನೂ ಕಳೆದುಕೊಳ್ಳುವುದಿಲ್ಲ. ಇದು ಸಣ್ಣ ದೃಷ್ಟಿಕೋನದ ಆಲೋಚನೆ ಎಂದು ನಿಮಗೆ ಅನಿಸಿದರೂ ಕೂಡ ನಮ್ಮ ಪೂರ್ವಿಕರ ಜೀವನದೃಷ್ಟಿಕೋನದ ಮೌಲ್ಯಗಳನ್ನು ಮರು ನವೀಕರಿಸುವ ಕ್ರಮಗಳಲ್ಲಿ ಒಂದಾಗಿದೆ.

ನಾವು ಸಮಸ್ಯೆಗಳ ನೀರಿನ ಆಳಕ್ಕೆ ಮತ್ತೆ ಇಳಿಯಬಾರದು. ಸರಳ ಬದುಕನ್ನು ಒಪ್ಪಿಕೊಂಡವರಿಗೆ ಅಥವಾ ಅದನ್ನು ಶ್ಲಾಘಿಸುವವರಿಗೆ ಆ ಕುರಿತಂತೆ ಕೆಲವು ಹೊಳಹುಗಳನ್ನು ನಾನು ನೀಡಬಲ್ಲೆ. ಈ ರಾತ್ರಿ ಅವರಿಗೆ ನಾನು ನನ್ನ ಹೃದಯದಲ್ಲಿ ನೆಲೆ ನಿಂತಿರುವ ಆಲೋಚನೆಗಳನ್ನು ತಿಳಿಸುವುದರ ಮೂಲಕ ಹಾರೈಸಲಾರೆ. ಜಗತ್ತು ಎಂದಿಗೂ ತಪ್ಪು ಹಾದಿಯಲ್ಲಿ ಚಲಿಸುವುದಿಲ್ಲ ಎಂಬುವುದು ನನ್ನ ಬಲವಾದ ನಂಬಿಕೆಯಾಗಿದೆ. ನನ್ನ ದೃಷ್ಟಿಯಲ್ಲಿ ಸರಳವಾದ ಬದುಕಿಗೆ ನಾವು ಶಪಥ ಮಾಡಿದಾಗ ಮಾತ್ರ ಇಲ್ಲಿ ಹೊಸ ಜಗತ್ತು ಸೃಷ್ಟಿಯಾಗಲು ಸಾಧ್ಯ. ಒಂದು ರೀತಿಯಲ್ಲಿ ಅಸಾಧ್ಯವಾದ ಸಂಗತಿ ಎಂದು ಅನಿಸಿದರೂ ಸಹ ದೇವರಿಂದ ಸಾಧ್ಯವಾಗಬಲ್ಲದು. ನೀವು ಈ ಕುರಿತು ವಾಸ್ತವವಾಗಿ ಯೋಚಿಸುವುದರ ಮೂಲಕ ರಾಷ್ಟ್ರದ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬಹುದು.

ಮುಂದುವರಿಯುವುದು....

ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ
ಮುನಿಯಬೇಡ ಅನ್ಯರಿಗೆ ಅಸಹ್ಯ ಪಡಬೇಡ
ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ
ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ
ಇದೇ ನಮ್ಮ ಕೂಡಲ ಸಂಗಮದೇವನೊಲಿಸುವ ಪರಿ

– ಬಸವಣ್ಣ



Purity, patience and perseverance are the three essentials to success and above all, love.

- Swami Vivekananda



ವಿಶಿಷ್ಟ ಸಾಧಕಿಯರು



SHE MASTERED DIFFERENT ASANAS QUICKLY

As birds melodiously herald the arrival of dawn, yoga teacher Nazia leads her students in practising different asanas (poses) in the Beginner Yoga Course at the Rotary Hall in Nitte, 45 km from Mangaluru. As she backbends to perform Chakrasana on her toes, it would seem to anyone that she has been practising Yoga from decade. In 2016, the Mahila Samaj in her area had organised a special ten-day Yoga class to coincide with the 70th Independence Day. As an active member of the Mahila Samaj, Nazia enrolled and regularly attended the Yoga classes conducted by yoga teacher K. Narendra Kamath. "Yoga not only gave me relief from these sufferings but also heralded a new be-ginning," says Nazia. She used to practise yoga at her house, in Ambadekallu in Nitte Gram Panchayat limits and was keen on learning more. She began travelling to Karkala and attending classes on advanced yogasanas at Narendra Kamath's yoga centre. After the death of her husband three years ago, Nazia has single-handedly managed the responsibilities of the family. While tailoring is her means of livelihood, yoga is her passion. A seventh standard dropout, Nazia overcame her inhibitions and made a presentation before the members of the club, in December 2018. Nazia has won top honours in three state-level and two national-level yoga competitions so far. She also won a prize at the International Yoga Utsav in Thailand in May. Nazia won the bronze in the athletic championship, silver in solo and gold medal in choice championship events organised at International Yoga Utsav. She has crossed the barriers of religion to gain expertise in yoga which she strongly feels is secular in nature.


Courtacy : Deccan Herald, 22.07.2019, Collection by Dr. Poornima Jogi



ಡೊಳ್ಳು ಹೊಡೆವ ನಾರಿ – ಮಹಿಳೆಗೆ ದುಡಿಮೆಯ ದಾರಿ

ಕೊರಳಿಗೆ ಬಿದ್ದ ಭಾರದ ಡೊಳ್ಳು, ಕಿಂಚಿತ್ ನೋವನ್ನೂ ತೋರಿಸದೆ ಕುಣಿಯುವ ಹೆಣ್ಣು ಒಬ್ಬಿಬ್ಬರಲ್ಲ, 16 ಮಂದಿ. ಅವರೆಲ್ಲ 40 ದಾಟಿದವರು. ಎಲ್ಲರೂ ನಿರುದ್ಯೋಗಿ ನೇಕಾರ ಮಹಿಳೆಯರು. ಇವರದು ಬೆಳಗಾವಿ ರಾಮದುರ್ಗದ ಶಾಕಾಂಬರಿ ಡೊಳ್ಳು ಕುಣಿತ ತಂಡ. ಈ ಮಹಿಳಾ ಡೊಳ್ಳು ಕುಣಿತ ತಂಡದ ರೂವಾರಿ ನೇಕಾರ ಕುಟುಂಬದ ಶಂಕ್ರವ್ವ ಮುಗಳಿ. ಇವರಿಗೀಗ 42ವರ್ಷ. 2008ರಲ್ಲಿ ಜನಪದ ಸಂಘವನ್ನು ಕಟ್ಟಿ, ಜನಪದ ಕಲೆಗೆ ಪ್ರೋತ್ಸಾಹ ನೀಡುತ್ತಿದ್ದರು. ಈ ಆಸಕ್ತಿಯೇ ಡೊಳ್ಳು ಕುಣಿತಕ್ಕೆ ಪ್ರೇರಣೆಯಾಯಿತೆಂದೂ ಹೇಳುತ್ತಾರೆ. ನಂತರ ಈ ಸಂಘ ಶಾಕಾಂಬರಿ ಜನಪದ ಮಹಿಳಾ ಡೊಳ್ಳು ಕುಣಿತ ಸಂಘ ಎಂದು ಹೆಸರಾಯಿತು. ಆಧುನಿಕತೆಯ ಭರಾಟೆಯಲ್ಲಿ ನೇಕಾರಿಕೆ ಅವಸಾನದತ್ತ ಸಾಗುತ್ತಿದೆ. ದುಡಿವ ಕೈಗೆ ಕೆಲಸವೇ ಇಲ್ಲದಾಗಿದೆ. ನೇಕಾರ ಮಹಿಳೆಯರೂ ನಿರುದ್ಯೋಗಿಗಳಾಗಿದ್ದಾರೆ. ಡೊಳ್ಳು ಕುಣಿತ ಅವರಿಗೆ ಉದ್ಯೋಗ ನೀಡಿದೆ. ಈ ತಂಡದ 16 ಜನ ಮಹಿಳೆಯರು ಮನೆಯ ಕೆಲಸದೊಂದಿಗೆ ಡೊಳ್ಳು ಕುಣಿತ ಅಭ್ಯಾಸ ಮಾಡಿ ಪ್ರದರ್ಶನ ನೀಡುತ್ತಿದ್ದಾರೆ. ಈ ತಂಡದಲ್ಲಿ 60ರ ಹಿರಿಯ ಮಹಿಳೆ 'ದಾನಮ್ಮ ಪಟ್ಟದಕಲ್ಲು' ಡೊಳ್ಳು ಕುಣಿತ ಬರೀ ಪುರುಷರಿಗಲ್ಲ ನಾವೂ ಚೆನ್ನಾಗಿ ನಿರ್ವಹಿಸಬಲ್ಲೆವು ಎಂಬುದನ್ನು ಸಾಧಿಸಿ ತೋರಿಸಿದ್ದಾರೆ.

ಸಂಗ್ರಹ : ಮಹಾಂತೇಶ್ ಬಿ. ಉಜ್ಜಿನಕೊಪ್ಪ



ಗಾಂಧೀವಾದಿ ಎಂ.ವಿ. ರಾಜಶೇಖರನ್ ಅವರಿಗೆ ಕರ್ನಾಟಕ ಸರ್ಕಾರದ ಗೌರವ ನಮನ

ದೀರ್ಘಕಾಲದ ಅನಾರೋಗ್ಯದಿಂದ ಬಳಲುತ್ತಿದ್ದ ಕೇಂದ್ರದ ಮಾಜಿ ಯೋಜನಾ ಸಚಿವರು, ಹಿರಿಯ ಗಾಂಧೀವಾದಿ, ರಾಜಕಾರಣಿ ಎಂ.ವಿ. ರಾಜಶೇಖರನ್ (92) ಅವರು ದಿ. 13.04.2020 ಸೋಮವಾರ ಬೆಳಿಗ್ಗೆ ನಿಧನರಾಗಿದ್ದರು. ನಗರದ ಸಾಗರ್ ಅಪೋಲೋ ಆಸ್ಪತ್ರೆಗೆ ದಾಖಲಾಗಿದ್ದ ಅವರು ಚಿಕಿತ್ಸೆ ಫಲಕಾರಿಯಾಗದೆ ಕೊನೆಯುಸಿರೆಳೆದಿದ್ದರು. ಸೋಮವಾರ ಸಂಜೆ 4 ಗಂಟೆಗೆ ರಾಜಶೇಖರನ್ ಅವರ ಹುಟ್ಟೂರು ಕನಕಪುರದ ಮರಳವಾಡಿಯಲ್ಲಿ ಸಕಲ ಸರ್ಕಾರಿ ಗೌರವಗಳೊಂದಿಗೆ ಅಂತ್ಯಕ್ರಿಯೆ ನಡೆಯಿತು. ಅದಕ್ಕೂ ಪೂರ್ವದಲ್ಲಿ ನಗರದ ಬಸವನಗುಡಿಯಲ್ಲಿರುವ ಅವರ ಸ್ವಗೃಹದಲ್ಲಿ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಲಾಕ್‌ಡೌನ್ ಹಿನ್ನೆಲೆಯಲ್ಲಿ ತೀರಾ ಆಪ್ತರು ಹಾಗೂ ಕುಟುಂಬಸ್ಥರಿಗಷ್ಟೇ ಅಂತಿಮ ದರ್ಶನಕ್ಕೆ ಅವಕಾಶ ಮಾಡಿಕೊಡಲಾಗಿತ್ತು. ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರೂ, ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಅಂತಿಮ ದರ್ಶನ ಪಡೆದರು. ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮತ್ತು ಕಾಂಗ್ರೆಸ್ಸಿನ ಹಲವು ಮುಖಂಡರು ಸಾಗರ್ ಅಪೋಲೋ ಆಸ್ಪತ್ರೆಗೆ ಭೇಟಿ ನೀಡಿ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದಿದ್ದರು.



ಗಾಂಧಿ ಅನುಯಾಯಿ, ನೃಪತುಂಗ ಪ್ರಶಸ್ತಿ ಪುರಸ್ಕೃತ ಪಾಪು ಅವರ ಸಂಸ್ಮರಣೆ ಮುಖ್ಯಮಂತ್ರಿಗಳಿಗೆ ನಾಡೋಜ ಡಾ. ಪಾಟೀಲ ಪುಟ್ಟಪ್ಪ ಅವರ ಪತ್ರ

ಪ್ರಿಯ ಶ್ರೀ ಯಡಿಯೂರಪ್ಪ ಅವರಿಗೆ

ಸಪ್ರೇಮ ವಂದನೆಗಳು

ಶತಮಾನಗಳು ಕಂಡರಿಯದ ಪ್ರಕೃತಿಯ ಪ್ರಕೋಪದಿಂದ ನಮ್ಮ ಜನರು ತಮ್ಮ ಮನೆಮಾರು, ಪೈರು, ಪಚ್ಚೆ, ದನಕರು, ಪಾತ್ರೆಪಗಡಿ ಕಳೆದುಕೊಂಡು, ಸಂಪೂರ್ಣ ಅನಾಥರಾಗಿದ್ದಾರೆ. ಈಗ ಅವರಿಗೆ ನೆಲವೇ ಹಾಸುಗೆ, ಆಕಾಶವೇ ಹೊದಿಕೆ. ಅವರು ಬದುಕಿ ಉಳಿಯುವುದಕ್ಕೆ, ಅವರಿಗೆ ಈಗ ಯಾವ ಆಸರೆಯೂ ಇಲ್ಲ. ನೀವು ಅವರಿಗೆ ಜೀವನೋಪಾಯವನ್ನು ಒದಗಿಸಲು, ಅವರ ಕಣ್ಣೀರನ್ನು ಒರೆಸಿ, ಅವರ ಜೀವನಕ್ಕೆ ಭರವಸೆಯನ್ನು ಒದಗಿಸಿಕೊಡಲು, ನೀವು ನಿಮ್ಮ ಆರೋಗ್ಯವನ್ನು ಲೆಕ್ಕಿಸದೆ, ಸಂತ್ರಸ್ತರ ಪ್ರದೇಶಗಳಲ್ಲಿ ಹಗಲೆನ್ನದೆ ರಾತ್ರಿಯೆನ್ನದೇ ಸದಾ ಸುತ್ತುತ್ತಲೇ ಇದ್ದೀರಿ.

ನಿಮ್ಮನ್ನು ಯಾವ ರೀತಿ ಕೊಂಡಾಡಬೇಕು ತಿಳಿಯದು. ದೇವರು ನಿಮಗೆ ಅತ್ಯಗಾಧ ಶಕ್ತಿಯನ್ನು ಕೊಟ್ಟು ಕಳಿಸಿದ್ದಾನೆ. ನಿಮ್ಮ ಮೇಲೆ ಬಿದ್ದಿರುವ ಹೊಣೆ ಬ್ರಹ್ಮಾಂಡ ಗಾತ್ರದ್ದಾಗಿದೆ. ನೀವು ಅದನ್ನು ನಿರ್ವಹಿಸಿದ ರೀತಿಯನ್ನು ಕಂಡು ನಾನು ಬೆಕ್ಕಸ ಬೆರಗಾಗಿದ್ದೇನೆ. ಅನಿಸಿಕೆ ಇರುವ ಜನರೆಲ್ಲರಿಗೂ ನಿಮ್ಮ ಬಗೆಗೆ ಬೆರಗು ಹಾಗೂ ಕೌತುಕ, ಅವರ ಸಹಾನುಭೂತಿಯು ಈಗ ನಿರ್ವಂಚನೆಯಿಂದ ನಿಮ್ಮ ಕಡೆಗೆ ಹರಿದು ಬರಬೇಕು. ಈ ನಾಡು ಎಂದೂ ಕಂಡರಿಯದ ಭೀಕರ ಮಳೆ ಹಾಗೂ ನೆರೆ ಹಾವಳಿಯಿಂದ ತಮ್ಮ ಸರ್ವಸ್ವವನ್ನು ಕಳೆದುಕೊಂಡಿರುವ ನಮ್ಮ ಜನರಿಗೆ ಪರಿಹಾರ ಒದಗಿಸಿಕೊಡಲು ನೀವು ಕೈಗೊಂಡಿರುವ ಈ ಹೋರಾಟದಲ್ಲಿ ನಮ್ಮ ರಾಜ್ಯದ ಎಲ್ಲ ರಾಜಕೀಯ ಪಕ್ಷದವರು ಪಕ್ಷಭೇದ ಬದಿಗಿರಿಸಿ ನಿಮ್ಮೊಂದಿಗೆ ಈಗ ಕೈಜೋಡಿಸಿ ನಿಲ್ಲಬೇಕು. ರಾಜ್ಯಕ್ಕೆ ಬಂದೊದಗಿರುವ ಈ ಸಾರ್ವತ್ರಿಕ ದುರ್ಘಟನೆಯಲ್ಲಿ ತಪ್ಪುಗಳನ್ನು ಎಣಿಸುತ್ತಾ ದೋಷಾರೋಪಣೆ ಮಾಡುತ್ತಾ ಕುಳಿತುಕೊಳ್ಳಬಾರದು. ನಡೆಯುವವರು ಎಡವುತ್ತಾರಲ್ಲದೆ, ಕುಳಿತವರು ಎಂದೂ ಎಡವರು.

ರಾಜಕೀಯ ಹೋರಾಟಕ್ಕೆ ಅದರ ಕಾಲ ಇದ್ದೇ ಇದೆ. ಅದನ್ನು ಯಾರೂ ಅಲ್ಲಗೆಳೆಯಲಾರರು, ಆದರೆ ಇದು ಅದಕ್ಕೆ ಸಮಯವಲ್ಲ. ರಾಜ್ಯದ ಎಲ್ಲ ಪಕ್ಷಗಳ ಮುಖಂಡರೂ, ಮುಖ್ಯಮಂತ್ರಿಗಳು ಕೈಕೊಂಡಿರುವ ಈ ಹೋರಾಟದಲ್ಲಿ, ತಾವೆಲ್ಲರೂ ಒಂದೇ ಕುಟುಂಬಕ್ಕೆ ಸೇರಿದವರಂತೆ ಇಂದು ಕೈಜೋಡಿಸಿ ನಿಲ್ಲಬೇಕು. ತೊಂಬತ್ತಕ್ಕೆ ಬಂದಿರುವ ನನಗೆ ಈಗ ನಾನು ಸಾಧಿಸಬೇಕೆಂದಿರುವ ವೈಯಕ್ತಿಕ ಮಹತ್ವಾಕಾಂಕ್ಷೆಯೊಂದೂ ಇಲ್ಲ. ಆದರೆ ನಮ್ಮ ಜನರು ನಮ್ಮ ನುಡಿ ಸಬಲವಾಗಿ ಸಮೃದ್ಧವಾಗಿ ಬದುಕಬೇಕು, ಬೆಳೆಯಬೇಕು ಎನ್ನುವುದು ನನ್ನ ಮಹದಾಸೆ. ಅವುಗಳಿಗೋಸುಗ, ನನ್ನ ಕೊನೆಯ ಉಸಿರಿನವರೆಗೆ ನನ್ನ ನಿರಂತರ ಹೋರಾಟ ಇರುತ್ತದೆ. ಸುಖೀ ಭಾರತದಲ್ಲಿ ನಮ್ಮ ಭಾರತ, ಗೌರವ ಮರ್ಯಾದೆಗಳೊಂದಿಗೆ ತಲೆಯೆತ್ತಿ ನಿಲ್ಲಬೇಕು, ಅದೇ ನನ್ನ ಜೀವನದ ಅಪೇಕ್ಷೆ.

ಯಡಿಯೂರಪ್ಪನವರೇ, ಆಡುತ್ತ ಇರುವವರು ಆಡುತ್ತ ಇರಲಿ, ಸಂಕಷ್ಟದಲ್ಲಿರುವ ಜನರ ಸಂಕಟಗಳನ್ನು ಪರಿಹರಿಸುವ ನಿಮ್ಮ ಕಾರ್ಯ ಹೀಗೆಯೇ ನಡೆಯುತ್ತಾ ಹೋಗಲಿ. ಟೀಕೆ ಏನೇ ಬರಲಿ, ನೀವು ಅವೊಂದನ್ನು ಲೆಕ್ಕಿಸಬೇಡಿ. ಸದುದ್ದೇಶದ ಎಲ್ಲ ಜನರು ನಿಮ್ಮೊಂದಿಗೆ ಇದ್ದಾರೆ. ಅವರಿಗೆ ಈಗ ವಾದ ವಿವಾದ ಬೇಕಾಗಿಲ್ಲ. ತಾವು ಬದುಕುವ ಹಾದಿಯನ್ನು ತೋರಿಸುವ ಜನರು ಬೇಕಾಗಿದೆ. ನೀವು ಕೈಕೊಂಡಿರುವ ಮಹಾನ್ ಕಾರ್ಯದಲ್ಲಿ ಅಂಜದೆ ಅಳುಕದೆ ಮುಂದಾಗಿರಿ.

ಪ್ರೀತಿ ಗೌರವಾದರಗಳೊಂದಿಗೆ

ಸಹಿ/-

ನಿಮ್ಮ ಪಾಟೀಲ ಪುಟ್ಟಪ್ಪ

ಸೌಜನ್ಯ : ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ನವೆಂಬರ್ 2009ರ ಕರ್ನಾಟಕ ವಿಕಾಸ ಪತ್ರಿಕೆ



KASTURBA

- Usha Dhidhi

continued from the previous edition...

As per the Indian tradition, during the wedding, two stars known as Vasishtha and Arundhati are shown to the bride and the bridegroom. Arundhati means a wife who doesn't create obstacles in the path of her husband's progress. Wife is supposed to progress in conformity with that of her husband. Speaking about Kasturba, once Gandhiji said, "She never stopped me in my efforts to lead a pure life. And it was due to this, that in spite of having a substantial disparity in our intelligence and strength, our life together was happy, contented and ever evolving."

In the initial phases of the ashram life, Bapu would say that he was not able to convince Ba to get rid of the thought of practice of untouchability. But, the very next moment he would also say that in spite of all this, if he had to choose a companion for many lives to come, he would definitely choose Kasturba.

Kasturba had a habit of drinking coffee. Some ashramites asked, "Gandhiji, why don't you ask Kasturba to give up coffee"? Gandhiji answered, "Ba has already given up so many things. If I ask her to give up coffee, I prove myself to be an unfair husband." After some time Kasturba gave up drinking coffee.

One of the Gandhiji's colleague and an ashramite, Kaka Kalelkar writes, "Ashram was a school of life founded on strong principles." All the rules were followed very strictly in ashram. Kasturba was a repository of love and care. She was like a mother to all the ashramites. In some occasions, her love would prompt her to go against the rules of the ashram. In such occasions, Bapu would give in and treat



Ba as an exception and allow her to do the things, her way. Among all the ashramites, Ba was the only one in front of whom Bapu would give in. Bapu would sometimes, humorously say, "I am afraid of you, Ba!" As Bapu was physically weak, Ba would insist that he takes adequate rest. Then Bapu with a sense of humour would say, "You torture me more than the British do."

Ba was a very good cook. She was fond of eating, as well as feeding others. During her last days, when she was ill, she requested Manubahen to prepare snacks for Dr Gilder. She also asked her to make sweet bread for everyone. Then she said, "Even I like to eat the sweet bread today. Please go and ask if Bapu too wants to eat it?" Concerned about Ba's health, Bapu said, "I shall eat the sweet bread only if Ba doesn't eat." That very moment Ba decided not to eat it. Later she distributed the sweet bread to everyone with lot of love and affection.

ಇತಿಹಾಸದಲ್ಲಿ ಈ ದಿನ ಬೃಹತ್ ಮಹಿಳಾ ಒಕ್ಕೂಟ ಸ್ಥಾಪನೆ

ಜೂನ್ 30, 1966ರಲ್ಲಿ ಅಮೆರಿಕಾದ ವಾಷಿಂಗ್‌ಟನ್ ಡಿಸಿಯಲ್ಲಿ ಜಗತ್ತಿನ ಅತಿ ದೊಡ್ಡ ಮಹಿಳಾ ಒಕ್ಕೂಟ ನ್ಯಾಷನಲ್ ಆರ್ಗನೈಸೇಷನ್ ಫಾರ್ ವುಮೆನ್ (ಎನ್.ಒ.ಡಬ್ಲ್ಯೂ) ಸ್ಥಾಪನೆಯಾಯಿತು. ಬೆಟ್ಟಿ ಫ್ರೆಡಾನ್, ಪೌಲಿ ಮುರಾಯ್ ಮತ್ತೆಲ್ಲಾ 47 ಮಂದಿ ಸೇರಿ ಈ ಸಂಸ್ಥೆ ಪ್ರಾರಂಭಿಸಿದರು. ಮಹಿಳೆಯರ ಹಿತ ರಕ್ಷಣೆಗಾಗಿರುವ ಮಹಿಳಾ ಬೃಹತ್ ಸಂಸ್ಥೆ ಎಂದು ಹೆಸರು ಪಡೆದಿದೆ. ವಾಷಿಂಗ್‌ಟನ್‌ನಲ್ಲಿ ಕೇಂದ್ರ ಕಚೇರಿ ಇದೆ.

ಸಂಗ್ರಹ : ಎಸ್.ಎಂ. ಶ್ಯಾಮಲ
ಅಧ್ಯಾಪಕರು (ನಿ)

ಮಹಾನ್ ನಗರದ ಮಹಾನ್ ಶಿಲ್ಪಿ

– ಇಂದಿರಾ ಕೃಷ್ಣಪ್ಪ

ವರ್ತಮಾನದ ಭಾರತದಲ್ಲಿ ಮತ್ತು ವಿಶ್ವದಲ್ಲಿ ಮಾನ್ಯತೆ ಗಳಿಸಿದ ಬೃಹತ್ ಮಹಾನಗರಗಳಲ್ಲಿ ಬೆಂಗಳೂರು ಜಗದ್ವಿಖ್ಯಾತವಾಗಿದೆ. 'ಕ್ಲೀನ್ ಸಿಟಿ', 'ಸಿಲಿಕಾನ್ ಸಿಟಿ', 'ಗ್ರೀನ್ ಸಿಟಿ', 'ಐಟಿ ಹಬ್ ಆಫ್ ಇಂಡಿಯಾ' ಮತ್ತಿತರ ವಿಶೇಷಣಗಳಿಂದ ಕಂಗೊಳಿಸುತ್ತಿರುವ ಈ ನಗರದ ಮೂಲಶಿಲ್ಪಿ ಹಿರಿಯ ಕೆಂಪೇಗೌಡ ಅಥವಾ 1ನೇ ಕೆಂಪೇಗೌಡ ಎಂಬುದು ಐತಿಹಾಸಿಕ ದಾಖಲೆಗಳಿಂದ ತಿಳಿದು ಬರುತ್ತದೆ.

ಕವಿ ಗೋಪಾಲಕೃಷ್ಣ ಅಡಿಗರ ಕವನದ ಸಾಲು

"ಹೊಸ ನೆತ್ತರುಕ್ಕುಕ್ಕಿ ಆರಿ ಹೋಗುವ ಮುನ್ನ
ಹರೆಯದೀ ಮಾಂತ್ರಿಕನ ಮಾಟ ಮಸಳುವ ಮುನ್ನ
ಉತ್ಸಾಹಸಾಗಸದ ಉತ್ತುಂಗವೀಚಿಗಳ
ಈ ಕ್ಷುಬ್ಧ ಸಾಗರವು ಬತ್ತಿಹೋಗುವ ಮುನ್ನ
ಕಟ್ಟುವೆವು ನಾವು ಹೊಸ ನಾಡೊಂದನು
ರಸದ ಬೀಡೊಂದನು"

ಎಂಬ ನುಡಿಗಳಿಗೆ ಅನ್ವರ್ಥವಾಗುವಂತೆ ದೂರದರ್ಶಿತ್ವವುಳ್ಳ ನಾಡ ದೊರೆ ಹಿರಿಯ ಕೆಂಪೇಗೌಡ ಅಥವಾ 1ನೇ ಕೆಂಪೇಗೌಡ ಅವರು. 1531ರಿಂದ 1539ರವರೆಗಿನ ಆಡಳಿತಾವಧಿಯು ದೂರದರ್ಶಿತ್ವವುಳ್ಳ ದೊರೆಯು ಅನುಷ್ಠಾನಗೊಳಿಸಿದ ಶಾಶ್ವತ ಯೋಜನೆಗಳ ದ್ಯೋತಕವಾಗಿವೆ. ಬಹುತ್ವದ ಆದರ್ಶವನ್ನು, ಸರ್ವಜನರ ಅಭಿವೃದ್ಧಿ ಹಾಗೂ ನಾಡಿನ ಅಭ್ಯುದಯದೊಂದಿಗೆ ಬೆಸೆದ ಕೀರ್ತಿ ಇವರಿಗೆ ಸಲ್ಲುತ್ತವೆ. ವಿಶ್ವಕರ್ಮನಂತೆ, "ಬೆಂಗಳೂರು" ಎಂಬ ನವನಗರ ನಿರ್ಮಾಣ ಮಾಡಿದ ಕೆಂಪೇಗೌಡರು, ಕರ್ನಾಟಕದ ಏಕೀಕರಣಕ್ಕೆ ಭದ್ರ ಬುನಾದಿಯನ್ನೇ ಹಾಕಿದರು.



ಶಿವಗಂಗೆಯ ಗಂಗಾಧರೇಶ್ವರ ದೇವಾಲಯದಲ್ಲಿ ಕೆಂಪೇಗೌಡರ ಕಂಚಿನ ಪ್ರತಿಮೆ

"ಭೂಮಿ ಪ್ರಜೆಗಳದು, ರಾಜನ ಸ್ವಂತ ಆಸ್ತಿಯಲ್ಲ, ಅದರ ವಿನಿಯೋಗ ಪ್ರಜಾತಂತ್ರದ ಸಾಮೂಹಿಕ ಒಪ್ಪಂದದ ಮೇರೆಗೆ" ಎಂಬ ಪೂರ್ವಜರ ತತ್ವಗಳನ್ನು, ಗುರುಗಳ ಬೋಧನೆಯನ್ನು ಹೃದಯದಲ್ಲಿಟ್ಟುಕೊಂಡು ನಾಡಪ್ರಭು ಕೆಂಪೇಗೌಡರು, ವಿಜಯನಗರ ಅರಸರ ಅನುಮತಿಯೊಂದಿಗೆ 1535ರಲ್ಲಿ "ಕೋಟೆ, ನಗರ ನಿರ್ಮಾಣದ ಕಾರ್ಯ ಆರಂಭಿಸಿದರು. ಕೋಟೆ, ದೇವಾಲಯ, ಕೆರೆಕಟ್ಟೆಗಳ ನಿರ್ಮಾಣ ಲೋಕಹಿತಾರ್ಥಕ್ಕಾಗಿ ಈ ಮಹಾನ್ ಕಾರ್ಯಕ್ಕೆ ಇಡೀ ಪ್ರಜಾವರ್ಗ, ತಮ್ಮ ಸೈನ್ಯ, ಸಂಪತ್ತು ಮೀಸಲಿಟ್ಟು ದುಡಿದು, ಪುರೋಭಿವೃದ್ಧಿ ಮಾಡಬೇಕು" ಎಂದು ಜನತೆಗೆ ಕರೆಕೊಟ್ಟರು. ಪ್ರತಿ ಗ್ರಾಮಗಳಿಗೆ ತೆರಳಿ ಅವರ ಒಪ್ಪಿಗೆ ಪಡೆದರು. ಹಾಗೆಯೇ ಗುರು ಹಿರಿಯರು, ಕುಟುಂಬಸ್ಥರು ಸಜ್ಜನರ ಆಶೀರ್ವಚನ ಮತ್ತು ದೇವಿ ಕೆಂಪಾಂಬಿಕೆ ಆಶೀರ್ವಾದ ಪಡೆದು ನಗರ ನಿರ್ಮಾಣದ ನಕ್ಷೆ ತಯಾರಿಸಿದರು. ನಗರಕ್ಕೆ ನವದ್ವಾರ, ಒಂಭತ್ತು ಕೆರೆಗಳು, ನಾಲ್ಕು ದಿಕ್ಕಿನ ಶಿಖರ ಗೋಪುರಗಳು, ನಾಲ್ಕು ರಾಜಮಾರ್ಗಗಳು, ಹಾದಿಯ ಇಕ್ಕೆಲಗಳಲ್ಲಿ ಮಳಿಗೆಗಳು, ಮನೆಗಳು, ಮರಗಳ ಸಾಲುಗಳು, ತೋಪುಗಳು, ದೇವಾಲಯ, ಕಲ್ಯಾಣಿ, ಕಾರಂಜಿ ಸುತ್ತಲೂ ಹೊಲಗದ್ದೆ ತೋಟಗಳ ವಿಂಗಡಣೆಗಳಿಂದ ನಕ್ಷೆ ತಯಾರಾಯಿತು. ಅದರಂತೆ ಚೆನ್ನಮ್ಮನ ಕೆರೆ, ಕೆಂಪಾಂಬುದಿ ಕೆರೆ, ಧರ್ಮಾಂಬುಧಿ ಕೆರೆ, ಜಕ್ಕರಾಯನಕೆರೆ, ಕೆಂಪಾಪುರ ಅಗ್ರಹಾರ ಕೆರೆ, ಅಕ್ಕಿತಿಮ್ಮನಹಳ್ಳಿ ಕೆರೆ, ಯಡಿಯೂರು ಕೆರೆ, ಕಾರಂಜಿ ಕರೆ, ಚಾಪಾಮುದ್ರಿ ಕೆರೆ, ಬರ್ಗಾವತಿ ಕೆರೆ, ಅಲಸೂರು ಕೆರೆ, ವರ್ತೂರು ಕೆರೆ, ಸಂಪಂಗಿರಾಮ ಕೆರೆ ಇತ್ಯಾದಿ ಕೆರೆಗಳನ್ನು ಮತ್ತು ಸರಣಿ ಕೆರೆ ಜಾಲವನ್ನು ನಿರ್ಮಿಸಿದರು. ಚೆನ್ನಿಗರಾಯಸ್ವಾಮಿ, ಬೈರೇ ದೇವಸ್ಥಾನ, ಗವಿಗಂಗಾಧರೇಶ್ವರ ಗುಡಿ, ಧರ್ಮರಾಯ ಗುಡಿ, ಶಿವಗಂಗೆ ಬೆಟ್ಟದಲ್ಲಿ ಸೋಪಾನ ಕೆಂಪೇಗೌಡನ ಹಜಾರ, ಹಲಸೂರು ಸೋಮೇಶ್ವರ ದೇವಾಲಯ, ಬಸವನಗುಡಿಯ ದೊಡ್ಡ ಗಣಪತಿ ದೇವಾಲಯ, ಆಂಜನೇಯ, ನಂದೀಶ್ವರ, ಮಲ್ಲಿಕಾರ್ಜುನ ವಿಗ್ರಹಗಳ ನಿರ್ಮಾಣ ಮಾಡಿದರು. ಮೇದಾರ ಪೇಟೆ, ಚಿಕ್ಕಪೇಟೆ, ದೊಡ್ಡಪೇಟೆ, ನಗರ್ತಪೇಟೆ, ಮಡಿವಾಳಪೇಟೆ, ಬಳೇಪೇಟೆ, ತಿಗಳರಪೇಟೆ, ಕುಂಬಾರಪೇಟೆ, ಉಪ್ಪಾರಪೇಟೆ, ಅಕ್ಕಿಪೇಟೆ, ರಾಗಿಪೇಟೆ, ತರಗುಪೇಟೆ, ಸುಣಕಲ್‌ಪೇಟೆ, ಕುರುಬರ ಪೇಟೆ ಗಳನ್ನು ವರ್ತಕರಿಗೆ ವ್ಯಾಪಾರಿಗಳಿಗಾಗಿ ವಿಕೇಂದ್ರಿಕರಣ ಮತ್ತು ಸಮತೋಲನದ ಆಧಾರದ ಮೇಲೆ ನಿರ್ಮಿಸಿದರು. ಇದರಿಂದಾಗಿ ಬೆಂಗಳೂರು ಅತಿದೊಡ್ಡ ವ್ಯಾಪಾರ ಕೇಂದ್ರವಾಯಿತು. ಆಯಾಯ ಸ್ಥಳಗಳಲ್ಲಿ ಸಂತೆ ನಡೆಸುವ ಕ್ರಮ ಜಾರಿಗೆ ತಂದರು. ಸಾವನದುರ್ಗ ಕೋಟೆ, ಹುತ್ತರಿದುರ್ಗದ ಕೋಟೆ, ದೇವನಹಳ್ಳಿಯಲ್ಲಿ ಸೈನಿಕರ ತರಬೇತಿ ಕೇಂದ್ರ, ರಾಮನಗರದಲ್ಲಿ ಮದ್ದುಗುಂಡಿನ ಕಾರ್ಖಾನೆ, ಹಾಗೂ ಸರಹದ್ದುಗಳಲ್ಲಿ







ಮಾಗಡಿಯ ಸಾವನದುರ್ಗದ ಬಳಿ ಇರುವ ಗೋಪುರ



ಮಾಗಡಿ ಕೋಟೆ

ಕಾವಲು ಗೋಪುರಗಳನ್ನು ಕಟ್ಟಿಸಿ, ಬೆಂಗಳೂರು ನಗರವನ್ನು ಸಂರಕ್ಷಿತ ನಗರವಾಗಿಸಿದರು. ಸಮುದ್ರ ಮಟ್ಟದಿಂದ 949 ಮೀಟರ್ ಎತ್ತರದಲ್ಲಿರುವ ಪೆನಿನ್ಸುಲಾರ್ ನೈಸ್ ಶಿಲಾಪದರದ ಮೇಲಿರುವ ತಂಪಾದ ಹವಾಮಾನದ ಸ್ಥಳವನ್ನು ನಗರ ನಿರ್ಮಿಸಲು ಆಯ್ಕೆಮಾಡಿಕೊಂಡದ್ದು ಕೆಂಪೇಗೌಡರ ಪ್ರಾಕೃತಿಕ, ವೈಜ್ಞಾನಿಕ, ಭೌಗೋಳಿಕ ಪರಿಜ್ಞಾನದ ಹಾಗೂ ಮಹಾನ್ ಸಂಕಲ್ಪದ ದ್ಯೋತಕವಾಗಿದೆ. 480 ವರ್ಷಗಳ ಹಿಂದೆಯೇ ಇಂಥಹ ಸುಸಜ್ಜಿತ ನಗರ ನಿರ್ಮಾಣದ ಯೋಜನೆ ರೂಪಿಸಿದ ನಾಡಪ್ರಭುವಿನ ಆಡಳಿತ ವೈಖರಿ, ವಿಕೇಂದ್ರಿಕರಣ ಮತ್ತು ಸಾಮಾಜಿಕ ನ್ಯಾಯದ ಅಡಿಪಾಯದ ಮೇಲೆ ನಿಂತಿತ್ತು. ಬೆಂಗಳೂರು ಕೋಟೆ ಅರಮನೆಯಲ್ಲಿ ಒಡ್ಡೋಲಗದ ಚಾವಡಿಯಲ್ಲಿ ವಾರಕ್ಕೊಮ್ಮೆ ಸಭೆ ಮತ್ತು ತುರ್ತು ಸಭೆಗಳು ನಡೆಯುತ್ತಿದ್ದವು. ಅಧಿಕಾರಿಗಳು, ವಿದ್ವಾಂಸರು, ನ್ಯಾಯವಿತರಕರು, ಊರ ಪ್ರಮುಖರು ಕಾರ್ಯಭಾರದ ವಿವರಣೆ, ವರದಿ ಒಪ್ಪಿಸಬೇಕಾಗಿತ್ತು. ಅರಮನೆ ಮುಂಭಾಗದಲ್ಲಿ ಐದು ಚಾವಡಿ – ಅಡವಣೆ, ಬೊಕ್ಕಸ, ಠಾಣ್ಯ, ಗೋವು, ಸುಂಕದ ಚಾವಡಿಗಳಿರುತ್ತಿದ್ದವು. ಇವುಗಳಿಗೆ ನಿರ್ವಹಣಾಧಿಕಾರಿಗಳು, ಸಿಬ್ಬಂದಿಗಳನ್ನು ನೇಮಕಮಾಡಲಾಗಿತ್ತು. ಅಟ್ಟವಣೆ ಚಾವಡಿಯಲ್ಲಿ 9 ವಿಭಾಗಗಳಿದ್ದು ವಿವಿಧ ಕಂದಾಯ, ಸುಂಕ, ಕಾಣಿಕೆ ವಸೂಲಿ ವ್ಯವಸ್ಥೆ ಜಮಾ ದೈನಂದಿನ ಬಟವಾಡೆ ಹೊಂದಿತ್ತು. 5 ಚಾವಡಿಗಳಲ್ಲಿ ಪಾರುಪತ್ತೇಗಾರ, ಕರಣಿಕ, ರಡ್ಡಿ, ಗುರಿಕಾರ, ರಾಯಸದವರು, ಹಸ್ತಾಂತರಿ, ಗೊಲ್ಲ, ಕಾವಲುಗಾರ, ಶ್ಯಾನುಭೋಗ, ಧಪೇದಾರ, ಹೋಬಳಿದಾರ, ಸೇರುವೆಗಾರ, ದಳವಾಯಿ, ಸಂಪ್ರತಿ, ಕುದುರೆ ರಾವುತರು, ಕಾಲಾಳು ಸೈನ್ಯ, ಊಳಿಗದವರು, ಅರಮನೆ ಪರಿಚಾರಕರು, ತೋಟಿ, ತಳವಾರ, ನೀರುಗಂಟಿ ಇತ್ಯಾದಿ ವ್ಯವಸ್ಥಿತ ಸಿಬ್ಬಂದಿ ಜಾಲವನ್ನು ಆಯೋಜಿಸಿದ್ದರಿಂದ ಪ್ರಜೆಗಳಿಗೆ ಸುವ್ಯವಸ್ಥಿತ ನೆಮ್ಮದಿಯ ಜೀವನಕೊಡಲು ಸಾಧ್ಯವಾಯಿತೆಂಬುದನ್ನು ಮನಗಾಣಬಹುದು. ಸರ್ವಧರ್ಮ ಸಮಭಾವದ ದೃಷ್ಟಿಯಿಂದ ರಾಜ್ಯಭಾರ ಮಾಡಿದ ಕೆಂಪೇಗೌಡರು ವರದಕ್ಷಿಣೆ ನಿಷೇಧ, ಕೈಬೆರಳು ದೇವರಿಗೆ ಸಮರ್ಪಣೆ ಕಂದಾಚರಣೆ ನಿಷೇಧದಂತಹ ಸಮಾಜ ಸುಧಾರಣೆ ಕಾರ್ಯ ಕೈಗೊಂಡರು. ವಿವಿಧ ಸಮುದಾಯದ ಮುಖಂಡರ ಜೊತೆ, ಅವರ ಕಷ್ಟಸುಖಗಳ ಚರ್ಚೆ, ಸರ್ವರ ಸಮಕ್ಷಮ, ವಿವಾದಗಳ ನಿರ್ಣಯಗಳು, ರಾಜಾಜ್ಞೆ ಪಾಲನೆಯ ವ್ಯವಸ್ಥೆ ಅಲ್ಲಿತ್ತು. ಅನೇಕ ಶಿಲಾಶಾಸನಗಳು, ದತ್ತಿದಾನದ ತಾಮ್ರ ಶಾಸನಗಳು, ಭೂದಾನಗಳು, ಒಲೆಗರಿಗಳು ಕೆಂಪೇಗೌಡರ ಸಮಾಜಿಕ ಕಾರ್ಯಗಳ ವಿವರಗಳನ್ನು ನೀಡುತ್ತವೆ. ಯಲಹಂಕ ಭೂಪಾಲರು "ಯಶಸ್ವಿ ಆಡಳಿತಗಾರ"ರಿಗೆ ಅತ್ಯುತ್ತಮ ನಿದರ್ಶನರಾಗಿದ್ದಾರೆ. ರಾಜ್ಯದ ಕಟ್ಟಕಡೆಯ ಪ್ರಜೆಯೂ ಸಕಲ ಪಶುಪ್ರಾಣಿಗಳು ಆಹಾರ, ವಸತಿ, ಉಡುಪು ತೊಡುಪು, ನೀರು, ಕೊಟ್ಟಿಗೆ ಉಚಿತ ದಾನ ಧರ್ಮಾಧಿಗಳಿಂದ ಯಾವುದಕ್ಕೂ ಕೊರತೆಯಾಗದಂತೆ ಸಂಕಷ್ಟಗಳನ್ನು ನೀಗಿಕೊಳ್ಳಲು ಅನುಕೂಲಗಳನ್ನು ಒದಗಿಸಿ ಪ್ರಜಾಪ್ರಭುತ್ವದ ಮಾದರಿಯಲ್ಲಿ ಬೆಂಗಳೂರು ನಗರಾಡಳಿವನ್ನು ನಡೆಸಿದ "ಕೆಂಪೇಗೌಡರ" ಹೆಸರು ಅಚಂದ್ರಾರ್ಕವಾಗಿರುತ್ತದೆ.



ಹರಿಹರ ಬೆಟ್ಟದಲ್ಲಿರುವ ಕಲ್ಲಿನ ಛತ್ರಿ

ಮಹಾತ್ಮ ಗಾಂಧಿ ಮತ್ತು ಸ್ವಚ್ಛ ಭಾರತ

ಡಾ. ವೂಡೇ ಪಿ. ಕೃಷ್ಣ

(ಹಿಂದಿನ ಸಂಚಿಕೆಯಿಂದ ಮುಂದುವರಿದ ಭಾಗ)

ಒಮ್ಮೆ ಗಾಂಧೀಜಿ ಅವರ ಆಶ್ರಮದ ಬಳಿಯಿರುವ ಹಳ್ಳಿಯವರು ಮಲವನ್ನು ಮಣ್ಣಿನಿಂದ ಮುಚ್ಚಲು ನಿರಾಕರಿಸುತ್ತಾರೆ "ಇದು ಭಂಗಿಯವರು ಮಾಡುವ ಕೆಲಸ. ಅವರ ಮುಖ ನೋಡುವುದೂ ಸಹ ಪಾಪದ ಕೆಲಸ" ಎಂದೆಲ್ಲಾ ನಿಂದಿಸುತ್ತಾರೆ. ಆಗ ಗಾಂಧಿ ಅವರು ತಾವೇ ಆ ಕಾರ್ಯದ ಮೇಲ್ವಿಚಾರಣೆ ವಹಿಸಿಕೊಳ್ಳುತ್ತಾರೆ. ತಾವೇ ಎಲ್ಲರಿಗೂ ಮಾದರಿಯಾಗಬೇಕೆಂದು ಹಲವು ತಿಂಗಳು ಕಾಲ ಬುಟ್ಟಿ ಮತ್ತು ಕಸಬರಿಕೆಯೊಂದಿಗೆ ಹಳ್ಳಿಗೆ ಹೋಗುತ್ತಾರೆ. ಅವರಿಗೆ ಸ್ನೇಹಿತರು ಮತ್ತು ಅತಿಥಿಗಳೂ ಸಹಕಾರ ನೀಡುತ್ತಾರೆ. ಅವರೆಲ್ಲಾ ಸೇರಿ ಬುಟ್ಟಿ ತುಂಬಾ ಕಸ-ಕೊಳೆ, ಮಲವನ್ನು ತಂದು ಗುಂಡಿಯಲ್ಲಿ ಮುಚ್ಚುತ್ತಾರೆ.

ಅವರ ಆಶ್ರಮದ ಎಲ್ಲ ಸ್ವಚ್ಛತಾ ಕಾರ್ಯಗಳೂ ಅಲ್ಲಿ ವಾಸಿಸುವವರಿಂದಲೇ ನಡೆಯುತ್ತಿದ್ದವು. ಗಾಂಧಿ ಅವರು ಮಾರ್ಗದರ್ಶನ ಮಾಡುತ್ತಿದ್ದರು. ಹಲವು ಮತ, ಧರ್ಮ, ಬಣ್ಣಗಳ ಜನರು ಅಲ್ಲಿ ವಾಸಿಸುತ್ತಿದ್ದರು. ಆಶ್ರಮದಲ್ಲೆಲ್ಲೂ ಕೊಳೆ ಕಾಣುತ್ತಿರಲಿಲ್ಲ. ಎಲ್ಲ ವ್ಯರ್ಥ ವಸ್ತುಗಳನ್ನು ಗುಂಡಿಗಳಲ್ಲಿ ಹಾಕಲಾಗುತ್ತಿತ್ತು. ತರಕಾರಿ ಸಿಪ್ಪೆ ಮತ್ತು ಉಳಿದ ಆಹಾರ ಪದಾರ್ಥಗಳನ್ನು ಅವುಗಳಲ್ಲಿ ಮಾಡಲಾದ ಗೊಬ್ಬರ ಗುಂಡಿಯಲ್ಲಿ ಹಾಕಲಾಗುತ್ತಿತ್ತು. ಮಾನವ ಮಲವನ್ನು ಹೂತು ಹಾಕಿ ಗೊಬ್ಬರದಂತೆ ಬಳಸಲಾಗುತ್ತಿತ್ತು. ಆದ್ದರಿಂದ ಸರಿಯಾದ ಒಳಚರಂಡಿ ವ್ಯವಸ್ಥೆ ಇಲ್ಲದಿದ್ದರೂ ಸಹ ತೋಟವು ಕ್ರಿಮಿಕೀಟ, ಸೊಳ್ಳೆಗಳಿಂದ ಮುಕ್ತವಾಗಿತ್ತು.

ಗಾಂಧಿ ಮತ್ತು ಅವರ ಸಹವಾಸಿಗಳು ಗುಡಿಸುವ ಕಾರ್ಯವನ್ನು ಸರದಿಯಲ್ಲಿ ಮಾಡುತ್ತಿದ್ದರು. ಬಕೆಟ್ ಶೌಚಾಯಲ ಮತ್ತು ಎರಡು ಕಂದಕಗಳುಳ್ಳ ಶೌಚಾಲಯ ಎನ್ನುವ ನೂತನ ವಿಧಾನವನ್ನು ಅವರು ಪರಿಚಯಿಸಿದರು. ಅವರು ತಮ್ಮ ಈ ಹೊಸ ಅನ್ವೇಷಣೆಯನ್ನು ಆಶ್ರಮಕ್ಕೆ ಭೇಟಿ ಕೊಡುತ್ತಿದ್ದ ಎಲ್ಲರಿಗೂ ಹೆಮ್ಮೆಯಿಂದ ತೋರಿಸುತ್ತಿದ್ದರು. ಬಡವ ಶ್ರೀಮಂತ, ನಾಯಕ, ಕೆಲಸಗಾರ, ಭಾರತೀಯ ಮತ್ತು ವಿದೇಶಿಗ ಯಾರೇ ಆದರೂ ಇವುಗಳನ್ನೇ ಬಳಸಬೇಕಿತ್ತು. ಈ ಪ್ರಯೋಗವು ಸಾಂಪ್ರದಾಯಿಕ ಮನೋಧರ್ಮದ ಸಹವಾಸಿಗಳ ಮತ್ತು ಆಶ್ರಮದ ಮಹಿಳೆಯರಲ್ಲಿ ಮಲ ಸಂಗ್ರಹಣೆಯ ಬಗ್ಗೆ ಇದ್ದ ಪೂರ್ವಾಗ್ರಹವನ್ನು ಹೋಗಲಾಡಿಸಲು ಸಹಾಯ ಮಾಡಿತು.

'ಭಂಗಿ'ಗಳು ಮಾನವ ಮಲವನ್ನು ತಮ್ಮ ತಲೆ ಮೇಲೆ ಬಕೇಟುಗಳಲ್ಲಿ ಹೊತ್ತೊಯ್ಯುವ ದೃಶ್ಯ ಗಾಂಧಿ ಅವರನ್ನು ದುಃಖಕ್ಕೀಡು ಮಾಡಿತ್ತು. ಕೆಲವು ಸೂಕ್ತ ವಿಧಾನಗಳ ಮೂಲಕ ಹೇಗೆ ಸ್ವಚ್ಛತೆ ಕಾಪಾಡಬಹುದು ಎಂಬುದನ್ನು ಅವರು ವಿವರಿಸುತ್ತಿದ್ದರು. ಸ್ವಚ್ಛತಾ ಕಾರ್ಯವೂ ಒಂದು ಕಲೆ ಎಂಬುದನ್ನು ಗಾಂಧಿ ತಮ್ಮನ್ನು ತಾವು ಮಲಿನಗೊಳಿಸಿಕೊಳ್ಳದೇ ತೋರಿಸಿಕೊಟ್ಟರು.

ಅವರು ಬರೆಯುತ್ತಾರೆ "ಹಳ್ಳಿಯ ಸ್ವಚ್ಛ ಕೆರೆಯ ನೀರನ್ನು ಸ್ನಾನಕ್ಕೆ, ಬಟ್ಟೆ ಒಗೆಯಲು, ಕುಡಿಯಲು ಮತ್ತು ಅಡುಗೆಗೆ ಬಳಸುತ್ತಾರೆ. ಹಲವು ಕೆರೆಗಳಲ್ಲಿ ಹಸು, ಕರು, ಎಮ್ಮೆಗಳು ಮುಳುಗೇಳುತ್ತವೆ. ಆಶ್ಚರ್ಯಕರ ವಿಷಯವೆಂದರೆ, ಕೆರೆಗಳ ಈ ರೀತಿಯ ದುರ್ಬಳಕೆಯ ನಂತರವೂ ಹಳ್ಳಿಯ ಜನರು ಸಾಂಕ್ರಾಮಿಕ ರೋಗಗಳಿಂದ ಮುಕ್ತರಾಗಿರುವುದು!. ವೈದ್ಯಕೀಯ ಸಾಕ್ಷಿಗಳು ಸ್ವಚ್ಛ ಕುಡಿಯುವ ನೀರಿನ ಪೂರೈಕೆಯ ಕೊರತೆಯೇ ಹಲವು ಕಾಯಿಲೆಗಳಿಗೆ ಕಾರಣ ಎಂದು ಹೇಳುತ್ತವೆ. (ಹರಿಜನ, 8 ಫೆಬ್ರವರಿ 1935)

ವಿಶ್ವ ಆರೋಗ್ಯ ಸಂಸ್ಥೆಯು (WHO) ಭಾರತದ ಸ್ವಚ್ಛ ಭಾರತ ಮಿಶನ್‌ನ ಕಾರ್ಯಕ್ಕೆ ಶ್ಲಾಘನೆಯನ್ನು ವ್ಯಕ್ತಪಡಿಸಿದೆ. "ವಿಶ್ವ ಆರೋಗ್ಯ ಸಂಸ್ಥೆಯು ಸುರಕ್ಷಿತ ನೈರ್ಮಲ್ಯ ಸೇವೆಯನ್ನು ನೀಡುವಲ್ಲಿ ಭಾರತದ ಬದ್ಧತೆಯನ್ನು ಶ್ಲಾಘಿಸುತ್ತದೆ. 2014ರಲ್ಲಿ ದೇಶದಲ್ಲಿ ಆರಂಭವಾದ ಸ್ವಚ್ಛ ಭಾರತ ಮಿಶನ್ ಒಂದು ಉತ್ತಮ ಯೋಜನೆ. ಈ ಯೋಜನೆಯಲ್ಲಿ ಹೇಳಿರುವ ಪ್ರಕಾರ 2019ರ ಅಕ್ಟೋಬರ್‌ಗೆ ಪ್ರತಿಶತ ವ್ಯಾಪ್ತಿಯನ್ನು ಸಾಧಿಸಿದರೆ, ಅತಿಸಾರ ಸಂಬಂಧೀ ಕಾಯಿಲೆ ಹಾಗೂ ಪ್ರೋಟೀನ್ ಎನರ್ಜಿ ಮಾಲ್ ನ್ಯೂಟ್ರಿಷನ್ (PEM) ನಿಂದಾಗುತ್ತಿತ್ತು. ಸುಮಾರು 3,00,000ಸಾವನ್ನು ತಡೆದಂತಾಗುತ್ತದೆ."

ಮುಂದುವರಿಯುವುದು...



Busting COVID-19 myths

COVID-19 has a long gestation period (upto 14 days, according to the WHO), which has made it harder to contain as asymptomatic carriers have been transmitting the virus.

Coronavirus falsehoods you should not fall for

1. From the evidence so far, the COVID-19 virus can get transmitted everywhere, including hot and humid areas.
2. Hand dryers and hot baths cannot kill the virus; nor will standing in the sun
3. Drinking lots of water will not flush out the virus. Eating ice cream won't freeze the virus either
4. The virus cannot be transmitted through mosquito bites
5. Cleaning your nose with soap or sanitiser will not kill the virus
6. Spraying yourself with or drinking alcohol will not kill the virus
7. Having lots of vitamin and herbal supplements might build immunity, but will not protect you from getting infected
8. Holding your breath for 10 seconds without coughing is not a way to confirm whether or not you are infected with COVID-19. The test needs to be done by a medical practitioner. Results take 24 hours
9. There is no scientific evidence to suggest that cow urine or crushed bull horn can protect a person from the virus.
10. Flu vaccines do not protect against COVID-19

What doctors advise

1. Sanitisers with an alcohol content of over 60 percent can kill viruses like Novel Coronavirus, but this is only effective when combined with periodic washing of hands with soap (at least 20 seconds).
2. Avoid touching your face frequently.
3. Avoid sharing common utensils.
4. Stay away from those who are coughing or sneezing.
5. Practise social distancing.
6. Do not try self-medication. Consult a doctor if you feel you have COVID-19 symptoms.

UP-CLOSE WITH COVID-19

COVID-19 has a long gestation period (upto 14 days, according to the WHO), which has made it harder to contain as asymptomatic carriers have been transmitting the virus. The death rate is less than in SARS (Severe Acute Respiratory Syndrome) and MERS (Middle East Respiratory Syndrome) at present, but the virus has spread faster.

Transmission

Spreads mainly through contaminated hands or from close contact with an infected person. It is unclear how long the virus survives on various surfaces

Symptoms

Fever followed by dry cough and breathing issues. Eighty percent cases show minor flu symptoms. Those who are older are at risk of developing a severe version of COVID-19 (lung failure, septic shock, even death)

Alarm Bells

If the disease has reached community transmission level in your country, get a test done if you have constant fever and a dry cough or breathing issues

How it Turns Fatal

The virus latches onto lung cells that block debris, bacteria and dust. When it starts to kill these cells, the lungs begin to fill with fluid, making breathing difficult. The body's immune system kicks in, causing fever and mucus formation (cough or runny nose). In older people or those with pre-existing medical conditions, the immune system can go into overdrive, attacking healthy cells as well. This heightened immune response can lead to organ failure and death

Courtacy : India Today, March 2020

ವೈದ್ಯರಾಗಿ ಗಾಂಧೀಜಿ


– ವೇಮಗಲ್ ಸೋಮಶೇಖರ್

ಗಾಂಧೀಜಿ 1904 ರಲ್ಲಿ ದಕ್ಷಿಣ ಆಫ್ರಿಕದ ಜೋಹಾನ್ಸ್‌ಬರ್ಗ್‌ನಲ್ಲಿದ್ದಾಗ ಸಮೀಪದಲ್ಲಿ ಒಂದು ಚಿನ್ನದ ಗಣಿ ಇತ್ತು. ಅಲ್ಲಿ ಕರಾರು ಕೂಲಿಗಳಾಗಿ ಭಾರತೀಯರು ಕೆಲಸ ಮಾಡುತ್ತಿದ್ದರು. ಅವರ ವಾಸಕ್ಕಾಗಿ ಗಣಿಯ ಬಳಿಯ 'ಬ್ರಿಕ್‌ಫೀಲ್ಡ್'ನಲ್ಲಿ ನಿವೇಶನಗಳನ್ನು ಕೊಡಲಾಗಿತ್ತು. ಅದು ಕಾಲ ಕ್ರಮೇಣ ಕೊಳಗೇರಿಯಾಗಿ ಬದಲಾವಣೆಯಾಗಿತ್ತು. ಆ ಸ್ಥಳದ ಬಗ್ಗೆ 1904ರ ಮಾರ್ಚ್ ಪ್ರಾರಂಭದಲ್ಲಿ ಗಾಂಧೀಜಿ ಮೊಕದ್ದಮೆ ನಡೆಸುತ್ತಿದ್ದರು. ಆ ಪ್ರದೇಶ ಕೊಳಗೇರಿಯಾಗಲು ಅಲ್ಲಿನ ಬಿಳಿ ಯಜಮಾನನ ಬೇಜವಾಬ್ದಾರಿಯೇ ಕಾರಣವಾಗಿತ್ತು. ನೈರ್ಮಲ್ಯರಹಿತವಾಗಿದ್ದ ಆ ಸ್ಥಳದಲ್ಲಿ ಭಯಂಕರವಾದ ಪ್ಲೇಗ್ ರೋಗ ಹಬ್ಬಲಾರಂಭಿಸಿತು. ಬಹು ಬೇಗ ಹರಡುವ ಪ್ಲೇಗ್ ಅಲ್ಲಿನ 23 ಜನರಲ್ಲಿ ಇದ್ದಕ್ಕಿದ್ದಂತೆ ಕಾಣಿಸಿಕೊಂಡಿತು. 'ಇಂಡಿಯನ್ ಒಪಿನಿಯನ್' ಪ್ರೆಸ್‌ನಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಮದನ್‌ಜಿತ್ 1904ರ ಮಾರ್ಚ್ 18ರಂದು ಈ ಸುದ್ದಿಯನ್ನು ಗಾಂಧಿಯವರಿಗೆ ಮುಟ್ಟಿಸಿದ. ಗಾಂಧೀಜಿ ಅಲ್ಲಿಗೆ ಧಾವಿಸಿ ಅಲ್ಲಿನ ಭಾರತೀಯ ಹುಡುಗರೊಡನೆ ಬೈಸಿಕಲ್‌ನಲ್ಲಿ ಹೊರಟರು. ಅಷ್ಟರಲ್ಲಿ ಮದನಜಿತ್ ಧೈರ್ಯದಿಂದ ಒಂದು ಮನೆಯ ಬೀಗವನ್ನು ಒಡೆದು ರೋಗಿಗಳನ್ನೆಲ್ಲಾ ಅಲ್ಲಿಗೆ ಸಾಗಿಸಿದ್ದ. ಗಾಂಧೀಜಿ ಪ್ರತ್ಯೇಕವಾಗಿ ಒಂದು ಪುಟ್ಟ ಆಸ್ಪತ್ರೆಯನ್ನೇ ಅಲ್ಲಿ ಪ್ರಾರಂಭಿಸಿದರು. ಜೋಹಾನ್ಸ್‌ಬರ್ಗ್‌ನಲ್ಲಿ ವಕೀಲಿ ವೃತ್ತಿ ಮಾಡುತ್ತಿದ್ದ ಡಾ॥ವಿಲಿಯಂ ಗಾಡ್‌ಫ್ರೆ ಅವರಿಗೆ ಈ ಸುದ್ದಿ ತಿಳಿದಾಕ್ಷಣ ಅಲ್ಲಿಗೆ ಧಾವಿಸಿ ವೈದ್ಯರಾಗಿ ಕಾರ್ಯ ಆರಂಭಿಸಿದರು. ರಾತ್ರಿ ವೇಳೆಯಲ್ಲಿ ಯಾವುದೇ ದುರ್ಘಟನೆಗಳಾಗದಂತೆ ನೋಡಿಕೊಂಡರು.

ಮರು ದಿನ ಜೋಹಾನ್ಸ್‌ಬರ್ಗ್‌ನ ಪುರಸಭೆಯವರು ಖಾಲಿ ಇದ್ದ ಮಳಿಗೆಯೊಂದನ್ನು ಆಸ್ಪತ್ರೆಯಾಗಿ ಉಪಯೋಗಿಸಿಕೊಳ್ಳಲು ನೀಡಿದರು. ಆ ಮಳಿಗೆ ಬಹಳ ಕೊಳಕಾಗಿತ್ತು. ಗಾಂಧೀಜಿ ಕೆಲವರ ಸಹಾಯದಿಂದ ಆ ಮಳಿಗೆಯನ್ನು ಸ್ವಚ್ಛಗೊಳಿಸಿದರು. ಉದಾರಿಗಳಾದ ಭಾರತೀಯರು ಅಲ್ಲಿ ಕೆಲವು ಹಾಸಿಗೆಗಳನ್ನೂ, ಅವಶ್ಯಕವಾದ ವಸ್ತುಗಳನ್ನು ಒದಗಿಸಿ ತಾತ್ಕಾಲಿಕ ಚಿಕಿತ್ಸಾ ಕೇಂದ್ರವಾಗಿ ರೂಪಿಸಿಕೊಟ್ಟರು. ಪುರಸಭೆಯವರು 'ಎಮಿಲೀಬ್ಲೇಕ್' ಎಂಬ ದಯಾಪರಳಾಗಿದ್ದ ಒಬ್ಬ ದಾದಿಯನ್ನು ರೋಗಿಗಳ ಶುಶ್ರೂಷೆಗಾಗಿ ಕಳುಹಿಸಿಕೊಟ್ಟರು. ಪ್ಲೇಗ್ ಸೋಂಕಿದ ರೋಗಿಗಳಿಗೆ ಆಗಾಗ ಬ್ರಾಂದಿ ಕೊಡುವುದು ಅಲ್ಲಿನ ವಾಡಿಕೆ. ಆದ್ದರಿಂದ ಆಕೆ ಬ್ರಾಂದಿ ಮತ್ತು ಇತರ ವೈದ್ಯಕೀಯ ಸಲಕರಣೆಗಳೊಂದಿಗೆ ಸ್ಥಳಕ್ಕೆ ಧಾವಿಸಿದ್ದಳು. ಡಾ॥ ಗಾಡ್‌ಫ್ರೇ ಮೇಲ್ವಿಚಾರಣೆ ನೋಡಿಕೊಳ್ಳುತ್ತಿದ್ದರು. ಗಾಂಧೀಜಿಗೆ ಪ್ರಕೃತಿ ಚಿಕಿತ್ಸೆಯಲ್ಲಿ ಬಹಳ ಅನುಭವವಿತ್ತು. ಮೂವರು ರೋಗಿಗಳು ಆ ಚಿಕಿತ್ಸೆ ಮಾಡಿಸಿಕೊಳ್ಳಲು ಸಮ್ಮತಿಯಿತ್ತರು. ಗಾಂಧೀಜಿ ಅತ್ಯಂತ ಶ್ರದ್ಧೆಯಿಂದ ಅವರ ತಲೆ ಮತ್ತು ಎದೆಗೆ ಒದ್ದೆಯಾದ ಮಣ್ಣಿನ ಪಟ್ಟಿಯನ್ನು ಕಟ್ಟುತ್ತಿದ್ದರು. ಚಿಕಿತ್ಸೆ ಪಡೆಯುತ್ತಿದ್ದ ಮೂವರಲ್ಲಿ ಇಬ್ಬರು ಉಳಿದರು. ಇನ್ನೊಬ್ಬ ಮರಣಹೊಂದಿದನು. ಆದರೆ ಎಮಿಲೀಬ್ಲೇಕ್ ಪ್ಲೇಗ್ ರೋಗಿಗಳ ಸ್ಪರ್ಶದಿಂದ ತನಗೂ ರೋಗ ತಗುಲಬಹುದೆಂಬ ಭೀತಿಯಿಂದ ರೋಗಿಗಳನ್ನು ಮುಟ್ಟದೆ ಸೇವೆ ಸಲ್ಲಿಸುತ್ತಿದ್ದಳು. ಆಕೆಯಿಂದ ಬ್ರಾಂದಿ ಸೇವನೆಯ ಚಿಕಿತ್ಸೆ ಪಡೆಯುತ್ತಿದ್ದ 20 ಜನರೂ 1904ರ ಮಾರ್ಚ್ 20ರಂದು ಮರಣಹೊಂದಿದರು. ಅದಾದ ಒಂದೆರಡು ದಿನಗಳಲ್ಲಿ 27 ವರ್ಷ ವಯಸ್ಸಿನ ಆಕೆಗೂ ಅಂಟು ಜಾಡ್ಯವಾದ ಪ್ಲೇಗ್ ಸೋಂಕು ತಗುಲಿ 1904ರ ಮಾರ್ಚ್ 31ರಂದು ಮೃತಳಾದಳು. ರೋಗಿಗಳನ್ನು ಮುಟ್ಟಿ ಸೇವೆ ಸಲ್ಲಿಸುತ್ತಿದ್ದ ಗಾಂಧೀಜಿಗಾಗಲಿ ಮತ್ತು ಅವರಂತೆಯೇ ಸೇವೆ ಸಲ್ಲಿಸಿದ ನಾಲ್ಕು ಜನರಿಗೆ ಪ್ಲೇಗ್ ಸೋಂಕು ತಗುಲಲಿಲ್ಲ. ಇಂಥ ಅಪಾಯಕರ ಸನ್ನಿವೇಶಗಳಲ್ಲಿ ತಾನು ಅಲ್ಪಾಹಾರ–ಮಿತಾಹಾರ ಕ್ರಮವನ್ನು ಅನುಸರಿಸುತ್ತಿದ್ದುದೇ ಕಾರಣವಿರಬಹುದೆಂದು ಗಾಂಧಿ ಅವರ ಭಾವನೆಯಾಗಿತ್ತು.

ಬದುಕುಳಿದ ಇಬ್ಬರು ಭಾರತೀಯ ರೋಗಿಗಳನ್ನು ಜೋಹಾನ್ಸ್‌ಬರ್ಗ್‌ನಿಂದ ಏಳು ಮೈಲಿ ದೂರದ ಪ್ಲೇಗ್ ಆಸ್ಪತ್ರೆಗೆ ಸಾಗಿಸಿದರು. ಅಲ್ಲಿಗೆ ಗಾಂಧಿ ಅವರು ತಾತ್ಕಾಲಿಕ ಸೇವಾಕಾರ್ಯ ಕೊನೆಗೊಂಡಿತು.

ಇಡೀ ನಗರವನ್ನು ಪ್ಲೇಗಿನ ಭಯದಿಂದ ರಕ್ಷಿಸುವುದಕ್ಕಾಗಿ ಬ್ರಿಕ್‌ಫೀಲ್ಡ್‌ನಲ್ಲಿದ್ದ ಕೂಲಿಗಳ ನಿವೇಶನಗಳನ್ನು ನೆಲಸಮಮಾಡಿ 13 ಮೈಲಿಗಳ ದೂರದಲ್ಲಿದ್ದ ಕ್ಲಿಪ್ಸ್‌ಫ್ರೂಟ್ ಫಾರಂನ ವಿಶಾಲ ಪ್ರದೇಶದ ಡೇರೆಗಳಿಗೆ ಅವರನ್ನು ಕಳುಹಿಸಬೇಕೆಂದು ಜೋಹಾನ್ಸ್‌ಬರ್ಗ್‌ನ ಅಧಿಕಾರಿಗಳು ತೀರ್ಮಾನಿಸಿದರು. ಪುರಸಭೆಯ ಈ ಯೋಜನೆಗೆ ಗಾಂಧೀಜಿ ಪೂರ್ಣ ಸಹಕಾರ ನೀಡಿದರು. ಗಾಬರಿಗೊಂಡಿದ್ದ ಮತ್ತು ಅನಕ್ಷರಸ್ಥರಾಗಿದ್ದ ಬಡ ಭಾರತೀಯರಿಗೆ ಬ್ಯಾಂಕಿನ ವ್ಯವಹಾರದ ಗಂಧವೇ ಇರಲಿಲ್ಲ. ಆದ್ದರಿಂದ ತಮ್ಮ ಉಳಿತಾಯವೆಲ್ಲವನ್ನೂ ಗಾಂಧೀಜಿಗೆ ಕೊಡಬೇಕೆಂದು ತೀರ್ಮಾನಿಸಿದರು. ಬಿಡಿಗಾಸುಗಳನ್ನೂ ರೂಪಾಯಿ ನಾಣ್ಯಗಳನ್ನೂ ಸಂಗ್ರಹಿಸಿ ಭೂಮಿಯಲ್ಲಿ ಹೂತಿಟ್ಟಿದ್ದ



ಐಶ್ವರ್ಯವನ್ನು ಏಕಮಾತ್ರ ಗೆಳೆಯ ಗಾಂಧೀಜಿಗೆ ಕೊಟ್ಟರು. ಇಷ್ಟವಿಲ್ಲದೆ ಸ್ವೀಕರಿಸಿದ ಗಾಂಧಿ ಅವರ ಕೈಗೆ ಹೀಗೆ 60,000 ಪೌಂಡಿಗೂ ಅಧಿಕ ಹಣ ಸೇರಿತು. ಈ ಹಣಕ್ಕೆ ರಶೀದಿ ಕೊಟ್ಟು ನಾಣ್ಯಗಳನ್ನು ಕ್ರಿಮಿನಾಶಕ ದ್ರವದಿಂದ ಶುದ್ಧಿಗೊಳಿಸಿ ಬ್ಯಾಂಕ್‌ನಲ್ಲಿಯೇ ಠೇವಣಿಯಾಗಿ ಇರಿಸಿದರು. ಕಾಲಾನಂತರ ತಾತ್ಕಾಲಿಕ ಠೇವಣಿಗಳನ್ನು ಖಾಯಂ ಠೇವಣಿಯಾಗಿಡುವಂತೆ ಗೆಳೆಯರನ್ನು ಪ್ರೇರೇಪಿಸಿದರು. ಇದರಿಂದಾಗಿ ಬ್ಯಾಂಕಿನಲ್ಲಿ ಹಣವಿಟ್ಟು ವ್ಯವಹರಿಸುವುದು ಕ್ರಮೇಣ ಜಾರಿಗೆ ಬಂದಿತು. ಬ್ರಿಕ್‌ಫೀಲ್ಡ್‌ನಲ್ಲಿದ್ದ ಕೂಲಿ ನಿವೇಶನಗಳನ್ನು ಖಾಲಿ ಮಾಡಿ ಕ್ಲಿಪ್ಸ್‌ಫ್ರೂಟ್ ಫಾರಂ ಬಯಲಿನ ಗುಡಾರಗಳಿಗೆ ಎಲ್ಲರನ್ನೂ ವಿಶೇಷ ರೈಲಿನಲ್ಲಿ ಸ್ಥಳಾಂತರಿಸಿದರು. ಮರು ದಿನವೇ ಪುರಸಭೆಯವರು ಬ್ರಿಕ್‌ಫೀಲ್ಡ್‌ನ ಮನೆಗಳಿಗೆ ಬೆಂಕಿಯಿಟ್ಟು ನೆಲಸಮ ಮಾಡಿದರು. ಅಲ್ಲಿನ ಮಾರುಕಟ್ಟೆಯಲ್ಲಿ ಕೆಲವು ಸತ್ತ ಇಲಿಗಳು ದೊರಕಿದ ಕಾರಣದಿಂದ ಆ ಮನೆಗಳಿಗೆ ಬೆಂಕಿ ಹಚ್ಚಿ ನಾಶಗೊಳಿಸಿದ್ದರು.

ಕ್ಲಿಪ್ಸ್‌ಫ್ರೂಟ್ ಫಾರಂನ ಡೇರೆಗಳಲ್ಲಿ ವಾಸಿಸುತ್ತಿದ್ದ ಭಾರತೀಯರನ್ನು ಕಾಣಲು ಪ್ರತಿದಿನ ಜೋಹಾನ್ಸ್‌ಬರ್ಗ್‌ನಿಂದ ಗಾಂಧೀಜಿ ಬೈಸಿಕಲ್ ಮೇಲೆ ತಮ್ಮ ಗೆಳೆಯರೊಡನೆ ಬರುತ್ತಿದ್ದರು. ಬಯಲು ಪ್ರದೇಶದಲ್ಲಿನ ವಾಸದಿಂದ ಅವರೆಲ್ಲರ ಆರೋಗ್ಯ ಹಾಗೂ ಬದುಕು ಚೇತರಿಸಿಕೊಂಡಿತ್ತು. ಅವರನ್ನು ಉದ್ದೇಶಿಸಿ ಮಾತನಾಡಿದ ಗಾಂಧೀಜಿ "ಶುಚಿತ್ವ, ನೈರ್ಮಲ್ಯ, ಆರೋಗ್ಯ ಕಾಳಜಿ ನಮ್ಮೆಲ್ಲರ ಬದುಕಿನ ಒಂದು ಅಂಗ, ಕಿಕ್ಕಿರಿದು ವಾಸಿಸುವುದನ್ನು ತಪ್ಪಿಸಬೇಕು, ಗಾಳಿ-ಬೆಳಕು ಮುಕ್ತವಾಗಿ ಬರಲು ಅವಕಾಶ ಕಲ್ಪಿಸಿಕೊಳ್ಳಬೇಕು" ಎನ್ನುವ ಬುದ್ಧಿವಾದ ಹೇಳಿದರು. "ಹೃದಯ ಶುದ್ಧವಾಗಿದ್ದರೆ ಸಂಕಟ ಕಾಲದಲ್ಲಿ ಅದನ್ನು ಎದುರಿಸಲು ಮನುಷ್ಯರೂ, ಸೌಕರ್ಯಗಳೂ ತಾನಾಗಿಯೇ ಒದಗಿ ಬರುತ್ತವೆ" ಎಂಬುದು ಗಾಂಧೀಯವರ ಅನುಭವಜನ್ಯ ಸಲಹೆಯಾಗಿದೆ.

ಪ್ಲೇಗ್ ಸೋಂಕಿನಿಂದ ಜೋಹಾನ್ಸ್‌ಬರ್ಗ್ ಪುರಸಭೆ ಅಧಿಕ ನಷ್ಟವನ್ನು ಅನುಭವಿಸಿತು. ಆದರೆ ಅಲ್ಲಿ ಪ್ಲೇಗ್ ಹರಡುವುದನ್ನು ತಡೆಯುವುದರಲ್ಲಿ ಗಾಂಧೀ ಅವರ ಪಾತ್ರ ಮಹತ್ವದ್ದಾಗಿತ್ತು. ಜೋಹಾನ್ಸ್‌ಬರ್ಗ್ ನಗರ ಮತ್ತೆ ನಿಶ್ಯಂಕೆಯಿಂದ ಉಸಿರಾಡತೊಡಗಿತು. ನಿರ್ಭಯತೆ ಲಭಿಸಿತು.

ಆಧಾರ : 1. ಆತ್ಮ ಕಥೆ ಅಥವಾ ನನ್ನ ಸತ್ಯಾನ್ವೇಷಣೆ', ಮೋ.ಕ.ಗಾಂಧೀ, ಪುಟ: 303 ರಿಂದ 310

2. 'ಮಹಾತ್ಮ ಗಾಂಧಿ', ವಿನ್ಸಂಟ್ ಷೀನ್ ಅನುವಾದಕ: ವಿ.ಎಸ್.ನಾರಾಯಣರಾವ್, (ಪುಟ: 72 ರಿಂದ 75)

MASK PROBLEM



Wearing a mask is one of the most effective ways to combat the spread of coronavirus. No matter where you go, wearing of facial masks is compulsory now. Masks keep us from touching our face constantly, which is the most common habit to spread this deadly virus. Also, if someone is coughing or sneezing, it provides a guard against spreading droplets. But wearing the mask for prolonged periods can cause a lot of skin problems.

Wearing face masks for long durations can cause a flare-up of acne problems. There's sweat, oil and make-up present on the skin and when we cover them with a mask, it becomes occluded. And when we breathe into the mask, humidity develops in the mask, increasing the chances of acne. There has been an increase in cases of perioral dermatitis due to this as moisture and vapour, as well as any secretions such as saliva or mucus, are trapped inside the mask. It acts as an irritant to the skin and upsets the natural balance of the skin's layer around the mouth. This results in rashes, redness, irritation and scaling around the nose and mouth. Sometimes tiny pimples or pustules appear in clusters around the skin of the lips.

Humidity due to wearing of masks for longer durations makes the skin's layer too moist, trapping all this moisture inside the mask. It is almost like diaper dermatitis. But when the skin is in that moist environment and then we take the mask off and let the air out, it can sometimes become too dry and itchy.

There are many simple things we can do to protect our face from the side-effects of wearing masks. Sometimes, it also depends on the type of mask we are wearing. If it's a cloth mask, it has to be washed regularly.

- If you are not venturing outside and are safe at home where not many people are present, then avoid wearing masks for extended periods of time.
- If your skin seems too much on the dry side, use a gentle, hypoallergenic moisturiser. Don't use something such as witch hazel or rubbing alcohol that will irritate the skin.
- Use a neutral cleanser, a mild soap or a good face wash to clean your skin.
- If you're using disposable masks, then after using it, hang it up in a sunny place to dry for a day or two before using it again.
- Consult a dermatologist if you do not know how to manage your condition as waiting for too long can aggravate the situation.

Dr. Ajay Rana
(The author is founder & director, ILAMED)
Courtacy : Deccan Herald - 30.06.2020
Collection by : V. Prashanth

FEVER!

Condensed form of 'Fever Book" - 1974 & Published by Hart Davis Macgibbos, P.O. - 9 St Albans, England : by John Fuller

continued from the previous edition...

Today the threat of plague seems unreal. Yet In January 1969 an unknown killer struck in Nigeria virus of such overwhelming power that in this age of jet travel it could trigger global calamity, In a dangerous race against time, a team of researchers risked their lives to track the virus to its source and find a vaccine that would be able to conquer it. This is the story of that quest, one of the most fascinating and Inspiring medical revelations of our time

That night, though hardly able to speak, Laura Wine had complained about discomfort in her throat, and Charlotte went to a Near-by cabinet for a gauze swab. She wrapped it around her finger and gently cleansed the ulcerated throat. As the fluid soaked through the gauze, she became aware of a slight stinging sensation in her fore finger, and suddenly remembered the rose prick. She disposed of the gauze, Used her finger with water and soaps dabbed it with more antiseptic and put a bandage on it. Eight days after Laura Wine died, Charlotte began to notice severe back and leg pains. When she began to feel chills, she decided that she was going down with malaria, common on the Jos plateau. Reluctant to bother anyone with her problem, she took three anti-malaria tablets from the hospital dispensary, certain that by the next morning she would be back to her usual routine.

But in the morning there was no improvement. Her temperature was just under 39 degrees centigrade (102 F.). Another nurse persuaded Charlotte to go into hospital at once as a patient. Penny Pinneo, the head nurse, assisted Dr. Jenette as she gave the patient a thorough examination and took the necessary specimens for laboratory tests. Charlotte's fever had now risen to 39-4 degrees centigrade (103 F.), and one thought was on everyone's mind. But when Charlotte told them about the small wound on her finger and the stinging on she had felt when waeng Laura Wine's throat, they reassured her that there was nothing to worry about It is always easy to jump to conclusion in diagnoses, especially whenever reactive from a particular dramatic and mysterious case. On the other hand, Charlotte showed no signs of an ulcerated throat, and there was no difficulty in breathing, no subsurface haem or thawing. So, without being unduly alarmed, Penny Pinneo concerned and gave Charlotte the best possible attention, and left the rest to the Lord. But Charlotte did Dot improve. Seven days after she had become ill, her temperature had risen to 404 degrees centigrade (8 F) and indications of the strange users from which Laura Wine had suffered, appeared in her throat.

To be continued ...



ನವ ಭಾರತ ನಿರ್ಮಾಪಕರು

ಕಳೆದ ಸಂಚಿಕೆಯಿಂದ ಮುಂದುವರೆದ ಭಾಗ...

ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಲಕ್ಷಾಂತರ ಜನರು ಹೋರಾಡಿದ್ದಾರೆ. ತಮ್ಮ ಸ್ವಂತ ಹಿತಾಸಕ್ತಿಗಳನ್ನು ಬದಿಗಿಟ್ಟು ದೇಶವನ್ನು ವಿದೇಶಿಯರಿಂದ ಮುಕ್ತಗೊಳಿಸಲು ಜೀವನವನ್ನೇ ಪಣಕ್ಕಿಟ್ಟು ಶ್ರಮಿಸಿದ್ದಾರೆ. ಅಂತಹ ತ್ಯಾಗ, ನಿಸ್ವಾರ್ಥ ದೇಶಪ್ರೇಮಿಗಳ ಜೀವನವನ್ನು ಪರಿಚಯಿಸಲು ಈ ಅಂಕಣ.

ಡಾ. ಬಿ.ಆರ್. ಅಂಬೇಡ್ಕರ್ ಮತ್ತು ಕೈಗಾರಿಕೆ ಹಾಗೂ ಕಾರ್ಮಿಕರು

(ಏಪ್ರಿಲ್ 14, 1891 – 6 ಡಿಸೆಂಬರ್ 1956)

– ಇಂದಿರಾ ಕೃಷ್ಣಪ್ಪ

ಅಂಬೇಡ್ಕರ್ ಅವರು ಪ್ರಾದೇಶಿಕ ಕಾರ್ಮಿಕ ಆಯುಕ್ತರುಗಳ ಸಮ್ಮೇಳನದಲ್ಲಿ ಉದ್ಘಾಟನಾ ಭಾಷಣ ಮಾಡುತ್ತಾ, ಕೈಗಾರಿಕೆಗಳಲ್ಲಿನ ಅವ್ಯವಸ್ಥೆಗಳನ್ನು ಸುವ್ಯವಸ್ಥಿತಗೊಳಿಸಲು

1. ದೂರು ನಿರ್ವಹಣಾ ವ್ಯವಸ್ಥೆ
2. ಕೈಗಾರಿಕಾ ವ್ಯಾಜ್ಯ ಕಾಯ್ದೆಗೆ ತಿದ್ದುಪಡಿ
3. ಕನಿಷ್ಠ ವೇತನ ಕಾಯ್ದೆ – ಜಾರಿ ಮಾಡಬೇಕು.

ಕೈಗಾರಿಕಾ ಶಾಂತಿ ಎಂಬುದನ್ನು ಸಾಮಾಜಿಕ ನ್ಯಾಯದಿಂದ ಮಾತ್ರ ಪಡೆಯಬಹುದೇ ವಿನಹ, ಅಧಿಕಾರದಿಂದಲ್ಲ" ಎಂದರು. ಕೈಗಾರಿಕೆಗಳಲ್ಲಿನ ಕಾರ್ಮಿಕರು ಮತ್ತು ಕೃಷಿ ಕಾರ್ಮಿಕರಿಗಾಗಿ ಆರೋಗ್ಯ ವಿಮೆ, ಪರಿಹಾರ, ಪ್ರಾವಿಡೆಂಟ್ ಫಂಡ್, ಪಿಂಚಣಿ, ಇತ್ಯಾದಿಗಳು, ಕೃಷಿ ಮತ್ತು ಕೈಗಾರಿಕಾ ವಲಯದ ಕಾರ್ಮಿಕರಿಬ್ಬರಿಗೂ ದೊರಕಬೇಕು ಎಂದರು. ರೈತರು ಮತ್ತು ಕಾರ್ಮಿಕರು ಒಟ್ಟಾಗಿ, ರಾಜಕೀಯ ಅಧಿಕಾರ ಪಡೆಯದಿದ್ದರೆ, ಶೋಷಣೆ, ದಬ್ಬಾಳಿಕೆ, ಸಂಕಷ್ಟಗಳಿಗೆ ಪರಿಹಾರವೇ ಇಲ್ಲವೆಂದರು. ಕಾರ್ಮಿಕರ ಸ್ಥಿತಿಗತಿ ಸುಧಾರಣೆಗೆ ಅನೇಕ ಯೋಜನೆಗಳನ್ನು ಜಾರಿಗೆ ತಂದರು. ಉದ್ಯೋಗ ವಿನಿಮಯ ಕಚೇರಿಗಳು ಮತ್ತು ಕಾರ್ಮಿಕ ಸಂಶೋಧನಾ ಬ್ಯೂರೋ ಸ್ಥಾಪನೆಯಂಥ ಮಹತ್ತರ ಜವಾಬ್ದಾರಿ ನಿರ್ವಹಿಸಿದರು. ಜಗತ್ತಿನ ಕಾರ್ಮಿಕ ನಾಯಕ ಕಾರ್ಲ್ ಮಾರ್ಕ್ಸ್‌ರ ಅಧ್ಯಯನ ಮಾಡಿದರು. ನಂತರ ಬುದ್ಧ ಮತ್ತು ಕಾರ್ಲ್ ಮಾರ್ಕ್ಸ್ ಎಂಬ ಕೃತಿಯನ್ನು ರಚಿಸಿದರು. ಡಾ. ಅಂಬೇಡ್ಕರ್ ಅವರ ಆರ್ಥಿಕ ವಿಚಾರ ಮತ್ತು ಅಭಿವೃದ್ಧಿ ದೃಷ್ಟಿಕೋನವು ಬಹು ಮುಖ್ಯವಾಗಿ ನಾಲ್ಕು ಆಯಾಮಗಳಲ್ಲಿ ಕಾಣಬಹುದು. 1) ಜಲ ನೀತಿ, 2) ಖನಿಜ ನೀತಿ, 3) ಕಾರ್ಮಿಕ ನೀತಿ, 4) ಭೂಮಿ ಮತ್ತು ಕೃಷಿ ನೀತಿಗಳ ಮೂಲಕ ಅವರು ರಾಷ್ಟ್ರೀಯ ಆರ್ಥಿಕ ಕಾರ್ಯನೀತಿಯನ್ನು ಸಾಮಾಜಿಕ ನ್ಯಾಯದ ಮೂಸೆಯಿಂದ ಕಟ್ಟಕಡೆಯ ಜನಗಳಿಗೆ ತಲುಪಿಸುವ ಕಾರ್ಯ ಕೈಗೊಂಡರು ಅಂಬೇಡ್ಕರ್ ಅವರ ಸಮತೆ ಮತ್ತು ನ್ಯಾಯದ ತತ್ವಗಳನ್ನು ಖನಿಜ ಸಂಪತ್ತಿನ ಅಭಿವೃದ್ಧಿ ನೀತಿ ಮತ್ತು ಶಾಸನಾತ್ಮಕತೆಗೊಳಿಸಿದ ನೀತಿಯು, ಅಭಿವೃದ್ಧಿ ಯೋಜನೆಗಳಲ್ಲಿ ಆಸಕ್ತಿದಾಯಕವಾದ ಚರ್ಚೆಯಾಗಿದೆ. ಡಾ. ಅಂಬೇಡ್ಕರ್ ಅವರು "ಭಾರತೀಯ ಭೂಗರ್ಭ ಶಾಸ್ತ್ರ ಸರ್ವೇಕ್ಷಣೆ" ಸಮಿತಿ ಸದಸ್ಯರಾಗಿ ಆಯ್ಕೆಯಾದ ಕ್ಷಣವೇ ಅವರು, ಖನಿಜ ಕಾಯ್ದೆಗಳಿಗೆ ತಿದ್ದುಪಡಿ, ಭೂ ವಿಜ್ಞಾನ ಸಮಿತಿಯ ಅರ್ಥ ಮತ್ತು ವ್ಯಾಖ್ಯೆಯನ್ನು ವೈಚಾರಿಕಗೊಳಿಸದ್ದನ್ನು ಗಮನಿಸಬಹುದು. ಕಾನ್ಸಿಟುಯೆಂಟ್ ಅಸೆಂಬ್ಲಿಯಲ್ಲಿ ಈ ವಿಷಯದಲ್ಲಿ ವಿಚಾರಗಳನ್ನು ಮಂಡಿಸುತ್ತಾ, ಭೂಗರ್ಭ ಸರ್ವೇಕ್ಷಣಾ ಸಮಿತಿಯು



1. ಖನಿಜ ನಿಕ್ಷೇಪಗಳ ಖಚಿತತೆಯ ಕ್ಷೇತ್ರಕಾರ್ಯ
2. ಅಗತ್ಯವಿರುವೆಡೆಯಲ್ಲಿ ಪ್ರಾರಂಭಿಕ ಭೂ ಅಗೆತ ಕಾರ್ಯಗಳು
3. ಉತ್ಪಾದಿತವಾಗುವ ಖನಿಜ ಸಂಪತ್ತನ್ನು ಉಪಯೋಗಿಸುವಲ್ಲಿ ಎದುರಾಗುವ ಸಮಸ್ಯೆಗಳು – ಗೊಂದಲಗಳ ಪರಿಹಾರಗಳ ಕುರಿತು ಪ್ರಯೋಗಿಕ ಕಾರ್ಯ ಕೈಗೊಳ್ಳುವುದು ಮೂಲಭೂತ ಕಾರ್ಯಗಳಾಗಿವೆ.

ಸೀಸೆ, ಸತು, ಅಭ್ರಕ, ಸಲ್ಫರ್ ಇತ್ಯಾದಿ ಖನಿಜ ಮತ್ತು ಸಂಬಂಧಿತ ಕಲ್ಲು–ಸುಣ್ಣದ ನಿಕ್ಷೇಪಗಳ ಕುರಿತಾಗಿ ಭೂಗರ್ಭ ಸರ್ವೇಕ್ಷಣ ಸಮಿತಿ ಮತ್ತು ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಬೋರ್ಡ್‌ನ ಅಧ್ಯಕ್ಷರ ಅಂತರ ಪ್ರಾತಿನಿಧ್ಯವನ್ನು ಕಾನ್ಸಿಟ್ಯುಯೆಂಟ್ ಅಸೆಂಬ್ಲಿ ಒಪ್ಪುವಂತೆ ಮಾಡಿದರು. ಭಾರತದಲ್ಲಿ ಈ ನಿಕ್ಷೇಪಗಳ ಅವಗಣನೆ, ಬರ್ಮಾ ವಲಸಿಗರಿಗೆ ಮಾತ್ರ ಉದ್ಯೋಗ ಕಲ್ಪಿಸುವಿಕೆ, ಅರ್ಹ ಖನಿಜ ತಜ್ಞರಿಲ್ಲದಿರುವುದು ಮತ್ತು ತಾಂತ್ರಿಕ ಸಿಬ್ಬಂದಿಯ ಕೊರತೆ ಕಾರಣದಿಂದ ಭಾರತದಲ್ಲಿ ಗಣಿ ಉದ್ಯಮ, ಮ್ಯಾಂಗನೀಸ್ – ಅಭ್ರಕ ಉದ್ಯಮದಷ್ಟು ಸಮೃದ್ಧವಾಗಿ ಬಲಿಷ್ಠವಾಗಿ ಬೆಳೆದಿಲ್ಲ. "Better late than never" ಎಂದು ಅಸೆಂಬ್ಲಿಯಲ್ಲಿ ವಿವರಿಸಿದರು. ಮುಂದುವರಿದು, ಈ ಗಣಿ ಉದ್ಯಮ ಸಮಿತಿ ಕೈಗಾರಿಕೆ ಮತ್ತು ವಾಣಿಜ್ಯ ಕ್ಷೇತ್ರಗಳಲ್ಲಿನ ತಜ್ಞರನ್ನು ಒಟ್ಟಾಗಿಸಿ, ಭಾರತದಲ್ಲಿ ಗಣಿ ಕೈಗಾರಿಕೆಯಿಂದ ಆರ್ಥಿಕಾಭಿವೃದ್ಧಿ ಸಾಧಿಸಲು ಕ್ರಮವಹಿಸಲು ಸಮಿತಿಗೆ ತಜ್ಞರ ಸದಸ್ಯತ್ವವನ್ನು ಕಾನೂನಾತ್ಮಕ ಗೊಳಿಸಿದರು.

ಮುಂದುವರಿಯುವುದು...

ಮಹಿಳಾ ಸುರಕ್ಷತೆ - ತಂತ್ರಜ್ಞಾನದ ಶ್ರೀರಕ್ಷೆ

ಮಹಿಳೆಯ ಸುರಕ್ಷತೆಗೆ ಸಹಕಾರಿಯಾಗುವ ಎಲೆಕ್ಟ್ರಾನಿಕ್ ಉಪಕರಣಗಳು ಹಾಗೂ ಅಪ್ಲಿಕೇಷನ್‌ಗಳ ಅಭಿವೃದ್ಧಿ ನಿರಂತರವಾಗಿದೆ. ಅನೇಕ ಸ್ಟಾರ್ಟ್‌ಅಪ್ ಸಂಸ್ಥೆಗಳು ಮಹಿಳೆಯರ ಸುರಕ್ಷತಾ ಸಾಧನಗಳನ್ನು ಸಿದ್ಧಪಡಿಸಿವೆ. ಮಹಿಳೆ ತನ್ನ ಬ್ಯಾಗ್‌ನಲ್ಲಿ ಇಟ್ಟುಕೊಳ್ಳುವ ಅಥವಾ ಧರಿಸುವ ಆಭರಣ-ವಸ್ತುಗಳೇ ಸಾಧನಗಳಾಗಿವೆ.



ಉಗುರು ಬಣ್ಣ : ಪಾನೀಯಗಳಲ್ಲಿ ಮಾದಕ ವಸ್ತು ಬೆರೆಸಿ ಅತ್ಯಾಚಾರ ನಡೆಸುವ ಪ್ರಕರಣಗಳು ಹೆಚ್ಚುತ್ತಿವೆ. ಕುಡಿಯುವ ಪಾನೀಯವನ್ನು ಕೈಬೆರಳಿನಲ್ಲಿಯೇ ಪರೀಕ್ಷಿಸುವ ತಂತ್ರಜ್ಞಾನ ಅಭಿವೃದ್ಧಿಯಾಗಿದೆ. ಅಂಡರ್‌ಕವರ್ ಕಲರ್ಸ್ ಹೆಸರಿನ ಉಗುರು ಬಣ್ಣವನ್ನು ಬಳಸುವವರು ಪಾನೀಯದಲ್ಲಿ ಬೆರಳು ಸೋಕಿಸಿದರೆ ಸಾಕು, ಮತ್ತು ಬರುವ ಅಂಶಗಳಿದ್ದರೆ ಉಗುರು ಬಣ್ಣ ಬೇರೆ ಬಣ್ಣಕ್ಕೆ ತಿರುಗುತ್ತದೆ. ಇದರಿಂದ ಮುನ್ನೆಚ್ಚರಿಕೆ ದೊರಕುತ್ತದೆ.

ಪ್ಯಾನಿಕ್ ಬಟನ್ : ಕಾರಿನ ಕೀ, ಪರ್ಸ್ ಅಥವಾ ಬಟ್ಟೆಯಲ್ಲಿ ಧರಿಸುವ ಪುಟ್ಟ ಉಪಕರಣ 'ಪ್ಯಾನಿಕ್ ಬಟನ್'. ರಿಯಾಕ್ಟ್ ಮೊಬೈಲ್ ಸುರಕ್ಷತಾ ಸೇವೆ ಒದಗಿಸುತ್ತಿದ್ದು, ಒಮ್ಮೆ ಭಟನ್ ಒತ್ತಿದರೆ ನಿಮ್ಮ ಮೊಬೈಲ್‌ನಲ್ಲಿ ನಿಗದಿಪಡಿಸಿರುವ ತುರ್ತು ಸಂಖ್ಯೆಗಳಿಗೆ ಜಿಪಿಎಸ್ ಸ್ಥಳದ ಮಾಹಿತಿ ಮತ್ತು ಎಚ್ಚರಿಕೆ ಸಂದೇಶ ರವಾನೆಯಾಗುತ್ತದೆ.





ಸೇಪ್ಲೆಟ್ ಕಡಗ : ಕೈಕಡಗ ಅಥವಾ ವಾಚ್ ರೀತಿ ಕಾಣುವ ಸೇಪ್ಲೆಟ್‌ನ ಎರಡು ಬದಿಯಲ್ಲಿ ನೀಡಿರುವ ಎರಡು ಬಟನ್‌ಗಳನ್ನು ಒಟ್ಟಿಗೆ ಒತ್ತಿದರೆ ನಿಗದಿತ ಸ್ನೇಹಿತರು ಹಾಗೂ ಕುಟುಂಬ ಸದಸ್ಯರ ಮೊಬೈಲ್ ಸಂಖ್ಯೆಗೆ ಎಚ್ಚರಿಕೆ ಸಂದೇಶ ರವಾನೆಯಾಗುತ್ತದೆ. ಇದರೊಂದಿಗೆ ಬಳಕೆದಾರರ ಮೊಬೈಲ್ ಪೋನ್‌ನೊಂದಿಗೆ ಸಂಪರ್ಕ ಸಾಧಿಸಿ ಶಬ್ದ ರೆಕಾರ್ಡ್ ಮಾಡುವುದು ಶುರುವಾಗುತ್ತದೆ.

ಸಂಗ್ರಹ : ಡಾ. ಪೂರ್ಣಿಮಾ ಜೋಗಿ



15 January 1950 - Sardar Patel is seen with Dr Kailash Nath Katju, Governor of West Bengal, Dr. Syama Prasad Mookerjee and Dr Bidhan Chandra Roy on his arrival at Dum Dum Aerodrome, Calcutta

NATIONAL DOCTOR'S DAY: A GLIMPSE INTO DR BIDHAN CHANDRA ROY'S LIFE

On National Doctor's Day, many on social media paid tribute to Dr Bidhan Chandra Roy, an eminent physician, academician, freedom fighter and politician. Dr Bidhan Chandra Roy was the first Chief Minister of West Bengal after India gained Independence. National Doctor's Day is marked in honour of Dr BC Roy on his birth and death anniversary, on July 1. He was awarded the Bharat Ratna in 1961.

Dr Bidhan Chandra Roy was born in 1882 in Patna. He was the youngest of the five siblings. His father Prakash Chandra came from from a wealthy family in Jessore (now in Bangladesh) but he did not inherit much. The family lived on Prakash Chandra's moderate salary. Dr Bidhan Chandra Roy studied at Presidency College in Kolkata and later at Patna. studied at Presidency College in Kolkata and later at Patna College with Honours in Mathematics. In 1901, he joined the Calcutta Medical College. After completing medical studies in India. When the freedom movement was at its peak in India, Dr BC Roy was drawn towards it but he firmly believed that swaraj cannot be successful unless people were strong and healthy. He played a key role in establishing several healthcare facilities like the Jadavpur TB Hospital, Chittaranjan Seva Sadan, Kamala Nehru Memorial Hospital, Victoria Institution and Chittaranjan Cancer Hospital in Kolkata. His focus was particularly on healthcare for women and children. The Chittaranjan Seva Sadan for women and children was opened. 1933, when the Mahatma was starting a fast in Poona, Dr BC Roy went to see him. Gandhiji had refused medicines because they were was not made in India and asked him, "Why should I take your treatment? Do you treat four hundred million of my countrymen free?" The doctor had replied "No Gandhiji, I could not treat all patients free. But I came here not to treat Mohandas Karamchand Gandhi, but to treat someone who represents the four hundred million people of my country."

Courtacy : NDTV, 01.07.2020 - Collection by Dr. Ramalingeshwara (Sisira)



ಅಭಿಮಾನ ಉಳಿಸಿದ ಸೈನಿಕರ ಪ್ರಾಣ

ಪ್ರೊ. ಎಂ.ಎನ್. ಸುಂದರರಾಜ್

ನಮ್ಮ ದೇಶದ ಸೈನಿಕರು ಎಂತಹ ಪರಿಸ್ಥಿತಿಯಲ್ಲಿಯೂ ದೇಶದ ಗಡಿಗಳನ್ನು ಶತ್ರುಗಳಿಂದ ರಕ್ಷಿಸಿ, ಕಾಪಾಡುತ್ತಾರೆ. ತಮ್ಮ ಐಹಿಕ ಸುಖವನ್ನು ಬಲಿಗೊಟ್ಟು ದೇಶಕ್ಕಾಗಿ ತಮ್ಮ ಪ್ರಾಣವನ್ನೂ ಲೆಕ್ಕಿಸದೆ ಹೋರಾಡುವ ಅವರ ದೃಢ ಸಂಕಲ್ಪಕ್ಕೆ ನಾವೆಲ್ಲರೂ ತಲೆಬಾಗಲೇ ಬೇಕು. ಇಂತಹ ಒಂದು ಘಟನೆ ಇಲ್ಲಿದೆ. 1965ರ ಸಮಯ, ಮೇ ತಿಂಗಳಲ್ಲಿ ಗುಜರಾತಿನ ಕಚ್ ಪ್ರದೇಶದಲ್ಲಿ ಪಾಕಿಸ್ತಾನ ಆಕ್ರಮಣಕ್ಕೆ ಸಿದ್ಧತೆ ನಡೆಸಿತ್ತು. ಭಾರತ ತನ್ನ ಸೈನ್ಯ ಪಡೆಯನ್ನು ಪಾಕ್ ಗಡಿಯವರೆಗೂ ಕರೆದೊಯ್ದು ವಿಶ್ರಾಂತಿಗೂ ಅವಕಾಶಇಲ್ಲದೆ. ವಿಮಾನ ದಾಳಿಯಿಂದ ರಕ್ಷಣೆ ಪಡೆಯಲು ಟ್ರೆಂಚ್ (ಗುಂಡಿ) ತೆಗೆಯಲು ನಿಯುಕ್ತಿಗೊಳಿಸಿತು. ತೀವ್ರವಾದ ಬಿಸಿಲಿನ ಝಳ, ಎಷ್ಟೇ ನೀರು ಕುಡಿದರೂ ತಪ್ಪದ ದಾಹ. ಆದರೆ ನೀರಿನ ಅಭಾವ, ತಂದ ನೀರು ಬೇರೆ ಖರ್ಚಾಗಿದೆ. ಮರಳು ಮಿಶ್ರಿತ ಗಾಳಿ ಕಿವಿಮೂಗನ್ನು ಪ್ರವೇಶಿಸುತ್ತಿವೆ. ಇದರಿಂದ ಬಸವಳಿದ ಸೈನಿಕರು ಅತೀವ ದಾಹದಿಂದ ಕಂಗಾಲಾಗಿದ್ದರು. ಅವರ ಮೈಯಿಂದ ಬೆವರು ಸುರಿದು ಅವರ ಆಯಾಸವನ್ನು ಹೆಚ್ಚು ಮಾಡಿತ್ತು. ಕುಡಿಯಲು ಒಂದು ಹನಿ ನೀರಿಲ್ಲದೆ ಸೈನಿಕರು ಕೆಲಸವನ್ನೂ ಮಾಡಲಾಗದೆ, ಶಕ್ತಿಹೀನರಾಗಿ ಕುಳಿತಿದ್ದ ದೃಶ್ಯ ಮನಕುಲುಕುವಂತಿತ್ತು. ಆದರೂ ಅವರು ಕೆಲಸ ಮಾಡಲು ಮೇಲಾಧಿಕಾರಿಗಳ ನಿಷ್ಠುರದ ಆದೇಶಗಳು ಬೇರೆ. ಎಷ್ಟೋ ಸೈನಿಕರು ಬಿಸಿಲಿನ ಝಳ ಸಹಿಸಲಾಗದೆ ಮೂರ್ಛೆ ಹೋಗಿದ್ದು ಉಂಟು. ಇಂತಹ ಪರಿಸ್ಥಿತಿಯಲ್ಲಿ ಗತಪ್ರಾಣರಾದ ಸೈನಿಕರು ನೋಡು ನೋಡುತ್ತಿದ್ದಂತೆ ಕೆಲವು ಸಿಖ್ ಮಹಿಳೆಯರು ತಲೆಯ ಮೇಲೆ ದೊಡ್ಡ ದೊಡ್ಡ ಮಡಕೆಗಳನ್ನು ಹೊತ್ತು ಸೈನಿಕರಿದ್ದಲ್ಲಿಗೆ ನಡೆದು ಬಂದರು. ಏನೂ ಮಾತನಾಡದೆ ತಾವು ತಂದಿದ್ದ ಮಡಕೆಗಳನ್ನು ಅಲ್ಲಿಟ್ಟು ಮೌನವಾಗಿಯೇ ಅಲ್ಲಿಂದ ತೆರಳಿದರು. ಅದು ಬಹುಶಃ ನೀರಿರಬೇಕೆಂದು ತಿಳಿದ ಸೈನಿಕರು ಆ ಮಡಕೆಗಳತ್ತ ಧಾವಿಸಿದರು. ಮೊದಲು ತಮ್ಮ ನೀರಡಿಕೆಯನ್ನು ನೀಗಿಸಿಕೊಳ್ಳುವ ಅವರ ಆತುರ ಅವರನ್ನು ಹಾಗೆ ಮಾಡಿರಲು ಸಾಕು. ಎಲ್ಲ ಸೈನಿಕರೂ ಪಂಜಾಬಿ ಮಹಿಳೆಯರು ತಂದಿಟ್ಟ ಮಡಕೆಗಳತ್ತ ಓಡಿ, ಮಡಕೆಯ ಬಾಯನ್ನು ತೆರೆದು ನೋಡಿದಾಗ ಅಲ್ಲಿ ಕಂಡದ್ದೇನು? ಒಳ್ಳೆ ಹದವಾಗಿ ತಯಾರಿಸಿದ ಮಜ್ಜಿಗೆ. ಐವತ್ತಕ್ಕೂ ಹೆಚ್ಚು ಪಂಜಾಬಿ ಮಹಿಳೆಯರು ದೂರದ ಜ್ಯೋತಿಷ್‌ವಾಲಾ ಗ್ರಾಮದಿಂದ ಮೈಲುಗಟ್ಟಲೆ ನಡೆದು ಆ ಬೃಹತ್ ಮಜ್ಜಿಗೆ ಬಿಂದಿಗೆಗಳನ್ನು ಸೈನಿಕರಿಗಾಗಿಯೇ ಹೊತ್ತು ತಂದಿದ್ದರು. ಆ ಮರುಳಗಾಡಿನಲ್ಲಿ ದಾಹದಿಂದ ಕಂಗಾಲಾಗಿದ್ದ ಸೈನಿಕರು ಆ ಮಮತಾಮಯಿ ಮಹಿಳೆಯರು ಪ್ರೀತಿ ಗೌರವದಿಂದ ತಂದಿತ್ತ ಮಜ್ಜಿಗೆಯನ್ನು ಮನಸಾರೆ ಕುಡಿದು ಉತ್ಸಾಹದಿಂದ ಕಾರ್ಯ ನಿರತರಾದರು. ಇದು ಭಾರತೀಯ ಸೈನಿಕರ ಬಗ್ಗೆ ಗಡಿ ಪ್ರದೇಶದ ನಿವಾಸಿಗಳಲ್ಲಿ ಇರುವ ಆದರಾಭಿಮಾನವನ್ನೂ, ಸಹಾಯ ಮಾಡುವ ಮನೋಭಾವವನ್ನೂ ಸೂಚಿಸುತ್ತದೆ. ಅಲ್ಲದೆ, ನಮ್ಮ ಸೈನಿಕರು ನಾಡು ರಕ್ಷಣೆಗೆ ಹೋರಾಡುವ ಅದಮ್ಯ ಉತ್ಸಾಹವನ್ನೂ ಸಹ ಈ ಘಟನೆ ನೆನಪಿಸುತ್ತದೆ.

ಸೌಜನ್ಯ : ಕನ್ನಡಪ್ರಭ, ದಿ. 30.05.2015
ಸಂಗ್ರಹ : ಮಹಾಂತೇಶ ಬಿ. ಉಜ್ಜಿನಿಕೊಪ್ಪ

ಭಾರತೀಯರಲ್ಲಿ ದೇಶಪ್ರೇಮ ಹೊಮ್ಮಿಸುವ ಈ ಗೀತೆ ಷಹೀದ್ ಚಲನಚಿತ್ರದಲ್ಲಿ ಅಳವಡಿಸಲಾಗಿದೆ ಈ ಗೀತೆ ರಚಿಸಿದ ಕವಿ ಪ್ರದೀಪ್ ಅವರಿಗೆ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ಸಂದಿವೆ.

ಮೇರೆ ವತನ್ ಕೆ ಲೋಗೋಂ

ಏ ಮೇರೆ ವತನ್ ಕೆ ಲೋಗೊಂ
ತುಂ ಖೂಬ ಲಗಾಲೋ ನಾರಾ
ಯೆ ಶುಭದಿನ ಹೈ ಹಮ್ ಸಬಕಾ
ಲೆಹರಾಲೋ ತಿರಂಗಾ ಪ್ಯಾರಾ
ಪರ್ ಮತ್ ಭೋಲೋ ಸೀಮಾಪರ

ವೀರೋನೆ ಹೈ ಪ್ರಾಣ ಗವಾಯೆ
ಕುಛ ಯಾದ ಉನ್ಹೇಭಿ ಕರಲೋ
ಜೋ ಲೌಟಕೆ ಘರನಾ ಆಯೆ
ಏ ಮೇರೆ ವತನ ಕೆ ಲೋಗೊಂ
ಜರ ಅಂಖ ಮೆ ಭರಲೋ ಪಾನಿ
ಜೋ ಶಹೀದ್ ಹುಯೇ ಹೈ ಉನ್ಹಕಿ
ಜರಾ ಯಾದ ಕರೋ ಕುರಬಾನಿ
ತುಂ ಭೂಲನಾ ಜಾವೋ ಉನಃಕೊ
ಇಸ ಲಿಯೆ ಸುನೊ ಯೆ ಕಹಾನಿ
ಜೋ ಶಹೀದ್ ಹುಯೇ ಹೈ ಉನ್ಹಕಿ
ಜರಾ ಯಾದ ಕರೊ ಕುರಬಾನಿ

ಜಬ ಘಾಯಲ್ ಹುವಾ ಹಿಮಾಲಯ
ಖತರೆಮೆ ಪಡಿ ಆಜಾದಿ
ಜಬತಕ ಥಿ ಸಾಸ ಲಡೆ ವೊ
ಫಿರ ಅಪನಿ ಲಾಶ ಬಿಛಾದಿ
ಸಂಗೀನ ಪೆ ಧರಕರ ಮಾಥಾ
ಸೋಗಯೆ ಅಮರ ಬಲಿದಾನಿ
ಜೋ ಶಹೀದ್ ಹುಯೇ ಹೈ ಉನ್ಹಕಿ
ಜರಾ ಯಾದ ಕರೊ ಕುರಬಾನಿ

ಕೋಯಿ ಸಿಖ್ ಕೋಯಿ ಜಾಟ ಮರಾಠಾ
ಕೋಯಿ ಗುರಖಾ ಕೋಯಿ ಮದರಾಸಿ
ಸರಹದ ಪರ ಮರನೆ ವಾಲಾ
ಹರ ವೀರ ಥಾ ಭಾರತವಾಸಿ
ಜೋ ಖೂನ ಗಿರಾ ಪರವತ್‌ಪರ್
ವೋ ಖೂನಥಾ ಹಿಂದೂಸ್ತಾನಿ
ಜೋ ಶಹಿದ ಹುವೆ ಹೈ ಉನ್ಹಕಿ
ಜರಾ ಯಾದ ಕರೊ ಕುರಬಾನಿ

ಜಯ್ ಹಿಂದ್ ಜಯ್ ಹಿಂದ್
ಜಯ್ ಹಿಂದ್ ಜಯ್ ಹಿಂದ್
ಜಯ್ ಹಿಂದ್ ಜಯ್ ಹಿಂದ್

ಗೀತ ರಚನೆ : ಪ್ರದೀಪ್
ರಾಗ ಸಂಯೋಜನೆ : ಸಿ. ರಾಮಚಂದ್ರನ್
ಹಾಡಿದವರು : ಲತಾ ಮಂಗೇಶ್ಕರ್

ಪತ್ರ ವಿಭಾಗ : ಓದುಗರ ಪ್ರತಿಸ್ಪಂದನ

ಬಾಪು ಪ್ರಪಂಚ ವಿಶೇಷ ಸಂಚಿಕೆ ವೈಶಿಷ್ಟಪೂರ್ಣವಾಗಿದೆ. ಅದರಲ್ಲಿ ಬಹಳ ಮುಖ್ಯವಾಗಿ ಗಾಂಧೀಜಿ ಆತ್ಮಕಥೆ ಮತ್ತು ಗಾಂಧಿ ಮತ್ತು ಕರ್ನಾಟಕ ಮೌಲ್ಯಯುತವಾಗಿದೆ. ಈ ವಿಶೇಷ ಸಂಚಿಕೆಯ ಮುಖಪುಟದ ಚಿತ್ರ, ಸ್ವಾತಂತ್ರ್ಯ ಪೂರ್ವದ ಐತಿಹಾಸಿಕ ಚಿತ್ರ ಮೊದಲ ದುಂಡುಮೇಜಿನ ಸಭೆ ಮತ್ತು ಗಾಂಧಿ–ಅಂಬೇಡ್ಕರ್ ಅವರ ಉಪಸ್ಥಿತಿ ಅರ್ಥಪೂರ್ಣವಾಗಿದೆ. ಮಹಾತ್ಮಾಜಿ ಅವರ 'ಸತ್ಯಾನ್ವೇಷಣೆ' ಕೃತಿ ಮತ್ತು ಭಾರತದ "ಸಂವಿಧಾನವೇ" ಭಾರತದ ನೈಜ ಚರಿತ್ರೆ ಹೇಳುವ ರಾಷ್ಟ್ರೀಯ ಗ್ರಂಥವಾಗಿದೆ. ಮತ್ಯಾವುದೇ ಗ್ರಂಥವೂ ಭಾರತೀಯರಿಗೆ ಶ್ರೇಷ್ಠ ಗ್ರಂಥವಾಗಲಾರದು. ಈ ಸಂಚಿಕೆಯು ಕರ್ನಾಟಕದ ವರ್ತಮಾನದ ಎಲ್ಲಾ ಆಯಾಮವನ್ನು ಹೇಳುವ ಸಂಚಿಕೆಯಾಗಿ ಹೊರಹೊಮ್ಮಿರುವುದು ನನಗೆ ಸಂತೋಷ ತಂದಿದೆ.

ಎಂ. ಬಸವಯ್ಯ, ಶಿಕ್ಷಣ ತಜ್ಞರು & ಗಾಂಧಿ ಭವನದ ಸದಸ್ಯರು,ತುಮಕೂರು

ಬಾಪು ಪ್ರಪಂಚ ವಿಶೇಷ ಸಂಚಿಕೆಯಲ್ಲಿ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ. ಮನು ಬಳಿಗಾರ್ ಅವರ 'ಮೈಲಾರ ಮಹಾದೇವ' ಕುರಿತ ಲೇಖನ ಮತ್ತು ನ್ಯಾಷನಲ್ ಕಾಲೇಜು ಕಟ್ಟಿ ಬೆಳೆಸಿದ ಸ್ವಾತಂತ್ರ್ಯ ಸೇನಾನಿ, ವೈಜ್ಞಾನಿಕ ಚಿಂತಕ ಗಾಂಧೀವಾದಿ ಡಾ. ಹೆಚ್. ನರಸಿಂಹಯ್ಯ ಅವರ ಶತಮಾನೋತ್ಸವದ ನೆನಪಿನ ಲೇಖನ ಬಹಳ ಇಷ್ಟವಾಯಿತು. ಇತ್ತೀಚೆಗೆ ನಿಧನರಾದ ನಿತ್ಯೋತ್ಸವ ಕವಿ ಪ್ರೊ. ನಿಸಾರ್ ಅಹಮದ್ ಅವರ 'ನಿತ್ಯೋತ್ಸವ ಕವಿತೆ ಹಾಗೂ ಡಾ. ಸಿಸಿರಾ ಅವರ ಕಾವ್ಯ ಗುರು ನಿಸಾರ್ ಕವಿತೆಯು ಸಂದರ್ಭೋಚಿತವಾಗಿದೆ. ಗಾಂಧಿ ಭವನಕ್ಕೆ ವಂದನೆಗಳು

ಕು. ವಿನೋದ ನಾಗೇಂದ್ರ - ಬಿ.ಎ. ವಿದ್ಯಾರ್ಥಿನಿ, ಕನಕಪುರ, 6364056044

ಬಾಪು ಪ್ರಪಂಚ ಪತ್ರಿಕೆಯು ಗಾಂಧೀ ಭವನದ ಸಮಗ್ರ ವಸ್ತು, ವಿಚಾರ – ವಿಷಯಗಳನ್ನು ಕಟ್ಟಿಕೊಡುತ್ತಿದೆ. ಗಾಂಧಿ ಭವನವು ಕರ್ನಾಟಕದಾದ್ಯಂತ ಗಾಂಧಿ ಚಿಂತನೆಗಳನ್ನು ಪಸರಿಸುತ್ತಿರುವುದನ್ನು ಈ ಪತ್ರಿಕೆಯಲ್ಲಿ ಓದುತ್ತಿದ್ದೇನೆ. ಸ್ವಾತಂತ್ರ್ಯ ನಂತರ ಭಾರತದ ಹಲವು ವಿಷಯಗಳು, ಗಾಂಧಿ ಚಿಂತಕರು, ಮಹಿಳಾ ಹೋರಾಟಗಾರರ ಕುರಿತು ಅವರ ಪರಿಚಯವನ್ನು ತಿಳಿಸುತ್ತಿದ್ದೀರಿ. ಧನ್ಯವಾದಗಳು

ಡಾ. ಬಿ.ಎಸ್. ಅಶೋಕ್ ಕುಮಾರ್

ಹತ್ತು ಹಲವು ವಿಷಯ – ವಿಚಾರಗಳನ್ನು ಹೊತ್ತು ತಂದಿರುವ ಈ ಬಾರಿಯ ವಿಶೇಷ ಸಂಚಿಕೆ 'ಬಾಪು ಪ್ರಪಂಚ' ಪತ್ರಿಕೆಯು ಹಲವು ವೈಶಿಷ್ಟಗಳಿಂದ ಕೂಡಿದೆ. ಶಿಕ್ಷಣ ತಜ್ಞ ಡಾ. ವೂಡೇ ಪಿ. ಕೃಷ್ಣ ಅವರ ಮತ್ತು ಇಂದಿರಾ ಕೃಷ್ಣಪ್ಪ ಅವರ ಲೇಖನಗಳು ಸಕಾಲಿಕವಾಗಿದೆ. ಮುಖಪುಟ ಚಿತ್ರವು ಸ್ವಾತಂತ್ರ್ಯಸೇನಾನಿಗಳನ್ನು ಕುರಿತಾದದ್ದು ಪತ್ರಿಕೆಯ ಅಂದವನ್ನು ಹೆಚ್ಚಿಸಿದೆ. ಗಾಂಧೀ ಭವನವು ಯುವಕರಿಗೆ ಗಾಂಧಿ ಚಿಂತನೆಗಳನ್ನು ಪ್ರಚುರಪಡಿಸುತ್ತಿರುವ ಸುದ್ದಿ, ಎನ್.ಎಸ್. ಎಸ್. ಕೂಡಾ ಒಳಗೊಂಡಿರುವುದು. ಗಾಂಧಿ ಮನಸ್ಸುಗಳನ್ನು ಕುರಿತಾದ ಗ್ರಂಥಗಳು ಪ್ರಕಟಗೊಳ್ಳುತ್ತಿರುವುದು ಸಂತೋಷದ ವಿಷಯ. ಇದಕ್ಕಾಗಿ ಶ್ರಮಿಸುತ್ತಿರುವ ಗಾಂಧೀ ಸ್ಮಾರಕ ನಿಧಿಯ ಎಲ್ಲರಿಗೂ ಧನ್ಯವಾದಗಳು.

ಡಾ. ಆರ್. ವಾದಿರಾಜ್ ಕನ್ನಡ ಪ್ರಾಧ್ಯಾಪಕರು, ವಿಜಯಾ ಕಾಲೇಜು

ಬಾಪು ಪ್ರಪಂಚದ ಎಲ್ಲಾ ಲೇಖನಗಳು ಎಲ್ಲರಿಗೂ ಬಹಳ ಉಪಯುಕ್ತವಾಗಿದೆ.

ಮುನಿನಾರಾಯಣ, ವಿಜಯಪುರ.

ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ಗೌರವ ಕಾರ್ಯದರ್ಶಿಗಳ ಸಂಪಾದಕತ್ವದ 'ಬಾಪು ಪ್ರಪಂಚ' ಮಾಸಿಕ ಪತ್ರಿಕೆಯು ಗಾಂಧೀಜಿ ಅವರ ವಿಚಾರಧಾರೆಗಳನ್ನು ಸಚಿತ್ರವಾಗಿ ಚಿತ್ರಿಸುತ್ತಿದೆ. ಗಾಂಧೀ ಭವನದ ಚಟುವಟಿಕೆಗಳು ಈ ಪತ್ರಿಕೆಯ ತುಂಬಾ ರಾರಾಜಿಸುತ್ತಿರುವುದನ್ನು ಕಂಡು ಸಂತೋಷವಾಗುತ್ತಿದೆ. ಇದಕ್ಕಾಗಿ ಶ್ರಮಿಸುತ್ತಿರುವ ಅಧ್ಯಕ್ಷರಾದ ಡಾ. ವೂಡೇ. ಪಿ. ಕೃಷ್ಣ ಅವರಿಗೆ ಹಾಗೂ ಅಲ್ಲಿಯ ಸೇವಾಕರ್ತರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಪ್ರೊ. ಕೆ.ಸಿ. ಮುನಿಯಪ್ಪ, ಚಿಕ್ಕಬಳ್ಳಾಪುರ - 9449346137

ಸಂಪಾದಕರಾದ ಶ್ರೀಮತಿ. ಇಂದಿರಾ ಕೃಷ್ಣಪ್ಪ ರವರ ಬಾಪು ಪ್ರಪಂಚದ ಎಲ್ಲಾ ಲೇಖನಗಳು ಬಹಳ ಅದ್ಭುತ ವಾಗಿದೆ ಮತ್ತು ನಾನು ಇದೇ ಮೊದಲ ಬಾರಿಗೆ ಈ ಸಂಚಿಕೆಯನ್ನು ನೋಡಿ, ಓದಿ ಹೊಸ ಲೇಖನಗಳ ಹೊಸ ವಿಷಯಗಳು ನನಗೆ ಈ ಪತ್ರಿಕೆ ಓದಿ ತಿಳಿಯಿತು. ತಮಗೆ ಮತ್ತು ಪ್ರಧಾನ ಸಂಪಾದಕರಾದ ಡಾ.ವೂಡೇ ಪಿ ಕೃಷ್ಣ ರವರಿಗೆ ಅಭಿನಂದನೆಗಳು.

ಡಾ. ಶ್ಯಾಮ್ ಸುಂದರ್ ಆಡಳಿತ ವೈದ್ಯಾಧಿಕಾರಿ, ವಿಜಯಪುರ

ದೇಶದ ಹಿರಿಯ ಗಾಂಧಿವಾದಿ ಡಾ.ಎಸ್. ಎನ್. ಸುಬ್ಬರಾವ್ ರವರ " ಗಾಂಧಿವಾದಿ ಜಂಗಮನ ಶಾಂತಿಯಾತ್ರೆ " ಲೇಖನವು ಬಾಪು ಪ್ರಪಂಚ ದಲ್ಲಿ ಬಹಳ ಸುಂದರವಾಗಿ ಮೂಡಿಬಂದಿದೆ.

ಎನ್.ಎಸ್.ಪ್ರಸಾದ್, ಹೊಸಪೇಟೆ

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷರಾದ ಡಾ.ವೂಡೇ ಪಿ.ಕೃಷ್ಣರವರ "ಮಹಾತ್ಮ ಗಾಂಧಿ ಮತ್ತು ಸ್ವಚ್ಛ ಭಾರತ " ಲೇಖನವು ಶಿಕ್ಷಕರಿಗೆ ಬಹಳ ಉಪಯುಕ್ತವಾಗಿದೆ.

ಹೆಚ್.ಎಸ್. ರುದ್ರೇಶ್‌ಮೂರ್ತಿ, ಸುಗಟೂರು

ಆರೋಗ್ಯಕ್ಕೆ ಸಂಬಂಧಿಸಿದ ಜೀವನ ಸೂತ್ರಗಳು ಈ ಕರೋನ ರೋಗದ ಬಗ್ಗೆ ಮುನ್ನೆಚ್ಚರಿಕೆಯ ಜಾಗೃತಿ ಮೂಡಿಸುವ ಸೂತ್ರಗಳಾಗಿವೆ.

ವಿ.ಎನ್. ಸೂರ್ಯಪ್ರಕಾಶ, ವಿಜಯಪುರ

ಆಗಸ್ಟ್ ತಿಂಗಳಲ್ಲಿ ನಡೆಯಲಿರುವ ಕಾರ್ಯಕ್ರಮಗಳು

1. ಡಾ. ವಸುಂಧರಾ ಭೂಪತಿ ಅವರಿಂದ ಕೋವಿಡ್ – 19 ಸಂರಕ್ಷಣಾ ತರಬೇತಿ ದಿ. 05.08.2020
2. ಡಾ. ಸಂದೀಪ್, ಡಾ. ಗೀತ ಅವರಿಂದ ಕೊರೋನಾ ಕೇರ್ ಪ್ರಾತ್ಯಕ್ಷಿಕೆ (ಸಿಬ್ಬಂದಿ ವರ್ಗದವರಿಗಾಗಿ) 12.08.2020
3. ಸ್ವಾತಂತ್ರ್ಯ ದಿನಾಚರಣೆ 15.08.2020
4. ಗಾಂಧಿ ಭವನ ಮತ್ತು ಸಹ ಸಂಸ್ಥೆಗಳಲ್ಲಿ ಕೋವಿಡ್ – 19 ಪಿಡುಗು ನಿಯಂತ್ರಣ ಕ್ರಮಗಳ ಕುರಿತು ಪೂರ್ಣ ಪರಿಶೀಲನಾ ಸಭೆ – ದಿ. 26.08.2020



ಪುಸ್ತಕ ಪರಿಚಯ : ಯುದ್ಧ ಪೂರ್ವ ಕಾಂಡ

– ಡಾ. ಎಸ್.ರಾಮಲಿಂಗೇಶ್ವರ (ಸಿಸಿರಾ)

ಕೃತಿಕಾರರು : ಯಡೂರ ಮಹಾಬಲ, ಪ್ರಕಾಶಕರು : ಚಿಂತನ ಚಿಲುಮೆ ಪ್ರಕಾಶನ – 2019

ಭಾರತ ಮತ್ತು ಚೀನಾ ನಡುವೆ ನಡೆದ ಯುದ್ಧದ ಸಂದರ್ಭವು 1962 ಕಾಲಘಟ್ಟದ ಹಿಂದಿನ ರೋಚಕತೆಯನ್ನು ಯಡೂರ ಮಹಾಬಲ ಅವರ 'ಯುದ್ಧ ಪೂರ್ವಕಾಂಡ ಕೃತಿಯು ಸಮಗ್ರವಾದ ಚಾರಿತ್ರಿಕ ಮಹತ್ವವನ್ನು ಎಳೆಎಳೆಯಾಗಿ ಬಿಡಿಸಿ ಇಡುತ್ತದೆ. ಲೇಖಕರಾದ ಯಡೂರ ಮಹಾಬಲ ಅವರು ಸುಮಾರು 2500 ಪುಟಗಳಲ್ಲಿರುವ 5 ಸಂಪುಟಗಳನ್ನೊಳಗೊಂಡ ಭಾರತ ಚೀನಾ ಗಡಿವಿವಾದದ ಸಂಶೋಧನಾ ಗ್ರಂಥವು "ಅವಿಸ್ಮರಣೆಯ ಅರುಣಾಚಲ', 'ಅಕ್ಸಾಯ್ ಚಿನ್ ವಿವಾದದ ಇತಿಹಾಸ', 'ನಿಗೂಡ ಟಿಬೇಟ್' ಎನ್ನುವ ಮೂರು ಪುಸ್ತಕಗಳನ್ನು ಸರಣಿ ರೂಪದಲ್ಲಿ ಪ್ರಕಟಿಸಿರುತ್ತಾರೆ. ಈ ಕೃತಿಯು 1947ರಿಂದ 1962ರ ಅಕ್ಟೋಬರ್ 19ರ ವರೆಗಿನ ಘಟನೆಗಳ ತಾರ್ಕಿಕ ಬೆಳವಣಿಗೆಗಳನ್ನು ಚಿತ್ರಿಸುವ ಕಥನ ಕುತೂಹಲ ಇತಿಹಾಸ ದರ್ಪಣ 'ಯುದ್ಧ ಪೂರ್ವಕಾಂಡ' ಕೃತಿಯಾಗಿದೆ. ಸತ್ಯ ವಸ್ತುನಿಷ್ಠತೆಯನ್ನು ಗ್ರಹಿಸಿ ಈ ಗ್ರಂಥಗಳನ್ನು ಬರೆದಿದ್ದು ಅನೇಕ ಘನವಂತ ವ್ಯಕ್ತಿಗಳು, ರಾಜಕಾರಣಿಗಳು, ಬುದ್ಧಿಜೀವಿಗಳು ಈ ಯುದ್ದದ ಬಗೆಗೆ ಅಸಮಂಜಸವಾಗಿ ವರ್ತಿಸಿರುವುದನ್ನು ಲೇಖಕರು ಗುರ್ತಿಸಿದ್ದಾರೆ. ಯುದ್ಧ ಪೂರ್ವ ಕಾಂಡ ಕೃತಿಯು ಸಂಪೂರ್ಣವಾಗಿ ಭಾರತ–ಚೀನಾ ನಡುವಿನ ಅಸ್ಸಾಂ, ಸಿಕ್ಕಿಂ, ಹಿಮಾಚಲ ಪ್ರದೇಶ – ಚೀನಾ – ಟಿಬೇಟ್‌ಗಳ ಗಡಿವಿವಾದದ ನೂರಾರು ಪತ್ರವ್ಯವಹಾರಗಳು, ಮಾತುಕತೆಗಳು, ರಾಜತಾಂತ್ರಿಕ ಹಾಗು ಮಿಲಿಟರಿ ಸಾಕ್ಷ್ಯಾಧಾರಗಳನ್ನು ಸಂಪೂರ್ಣವಾಗಿ ಕೃತಿಯಲ್ಲಿ ಸಚಿತ್ರ ಸಮೇತ ಬರೆದಿದ್ದಾರೆ. ಭಾರತೀಯರು ಸ್ವಾತಂತ್ರ್ಯಪೂರ್ವ ವರ್ಷಗಳಿಂದಲೂ ಚೀನಾ, ಪಾಕಿಸ್ಥಾನ, ನೇಪಾಳ, ಬಾಂಗ್ಲಾ, ಬರ್ಮಾ, ಶ್ರೀಲಂಕಾ ರಾಷ್ಟ್ರಗಳ ಗಡಿ, ಜಲ, ಭಯೋತ್ಪಾದನೆ ವಿಷಯದಲ್ಲಿ ಅನೇಕ ಸಮಸ್ಯೆಗಳು ಇರುವುದನ್ನು ಕಾಣುತ್ತಿದ್ದೇವೆ. ಆದರೆ ಸ್ವಾತಂತ್ರ್ಯಾ ನಂತರದ ಕಾಲದಲ್ಲಿ ಪಾಕಿಸ್ತಾನದ ಭಯೋತ್ಪಾದನೆ ಮತ್ತು ಗಡಿ ಸಮಸ್ಯೆ ಇಂದಿಗೂ ಮುಂದುವರೆದಿದೆ. ಇತ್ತೀಚಿನ ವರ್ಷಗಳಲ್ಲಿ ಚೀನಾದ ಆಕ್ರಮಣಕಾರಿ ನೀತಿಯ ಮೂಲಕ ಭಾರತದ ಮೇಲೆ ಸದಾ ಸವಾರಿ ಮಾಡುತ್ತಿದೆ. ಸೌಮ್ಯವಾಗಿರುವ ಗಡಿ ಸಮಸ್ಯೆ ಆಗಾಗ್ಗೆ ತೀವ್ರಗೊಳ್ಳುತ್ತಲೇ ಇದೆ. ಒಟ್ಟಿನಲ್ಲಿ 640 ಪುಟಗಳಲ್ಲಿ ಅರ್ಥಪೂರ್ಣ ಮತ್ತು ಸ್ಪಷ್ಟ ಮಾಹಿತಿಗಳನ್ನು ಕಲೆಹಾಕಿದ್ದಾರೆ. ಇದೊಂದು ಇತಿಹಾಸ ಸಂಶೋಧನಾ ಗ್ರಂಥವಾಗಿದೆ.

ಗಾಂಧಿ ಭವನದ ಕಾರ್ಯಕ್ರಮಗಳು

1. ದಿ.27.06.2020 ರಂದು ಗಾಂಧಿ ಭವನದ ನಾಡಪ್ರಭು ಕೆಂಪೇಗೌಡ ದಿನಾಚರಣೆಯಲ್ಲಿ ಡಾ. ವೂಡೇ. ಪಿ. ಕೃಷ್ಣ, ಅಧ್ಯಕ್ಷರು, ಗಾಂಧಿ ಭವನ ಇವರು ಕಾರ್ಯಕ್ರಮ ಉದ್ಘಾಟಿಸಿದರು. ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ ಅವರು ಮಹಾನ್ ಶಿಲ್ಪಿ ಬಗ್ಗೆ ಮಾತನಾಡಿದರು. ಎನ್‌ವೈಪಿಯ ಪ್ರಶಾಂತ್, ಸಹ ಸಂಸ್ಥೆ ಪದಾಧಿಕಾರಿಗಳು ಹಾಗೂ ಸಿಬ್ಬಂದಿವರ್ಗದವರು ಭಾಗವಹಿಸಿದ್ದರು.
2. ದಿ. 29/06/2020 ರಂದು ಗಾಂಧಿ ಭವನಕ್ಕೆ ಆಗಮಿಸಿದ ಮಾಜಿ ರಾಜ್ಯಸಭಾ ಸದಸ್ಯರು ಹಾಗೂ ಮಾಜಿ ಅಧ್ಯಕ್ಷರು ಕೇಂದ್ರ ಖಾದಿ ಮಂಡಳಿ ಎಚ್.ಹನುಮಂತಪ್ಪ ಅವರಿಗೆ ಗೌರವ ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ ಅವರಿಂದ ಮಾಸ್ಕ್ ಗಳನ್ನು ಹಾಗೂ ಬಾಪು ಪ್ರಪಂಚ ಪುಸ್ತಕ ನೀಡಿ ಗೌರವಿಸಲಾಗಿತ್ತು. ಇದೇ ಸಂದರ್ಭದಲ್ಲಿ ರಾಜ್ಯದ ಕರೋನ ಪರಿಸ್ಥಿತಿಯ ಬಗ್ಗೆ ಜಾಗೃತಿ ಚರ್ಚೆ ನಡೆಯಿತು.
3. ದಿ. 01/07/2020 ರಂದು ದೇವನಹಳ್ಳಿ ತಾಲೂಕಿನ ವಿಜಯಪುರದ ಸರ್ಕಾರಿ ಸಮುದಾಯ ಆರೋಗ್ಯ ಕೇಂದ್ರದ ಆವರಣದಲ್ಲಿ ಗಾಂಧಿ ಭವನದ ಸಹಕಾರದೊಂದಿಗೆ ವಿಶ್ವ ವೈದ್ಯರ ದಿನಾಚರಣೆ ಆಚರಿಸಲಾಯಿತು. ಆಡಳಿತ ವೈದ್ಯಾಧಿಕಾರಿ ಡಾ. ಶ್ಯಾಮ್ ಸುಂದರ್ ಹಾಗೂ ಪ್ರಸೂತಿ ತಜ್ಞೆ ಕರ್ಪದಾ ರವರನ್ನು ಸನ್ಮಾನಿಸಲಾಯಿತು. ಹಿರಿಯ ಸಾಮಾಜಿಕ ಕಾರ್ಯಕರ್ತ ವಿ.ಎನ್. ಸೂರ್ಯಪ್ರಕಾಶ, ರಾ.ಯು.ಯೋ. ರಾಜ್ಯ ಸಂಯೋಜಕ ಡಾ. ವಿ. ಪ್ರಶಾಂತ, ಎಚ್.ಐ.ವಿ. ಆಪ್ತ ಸಮಾಲೋಚಕಿ ಸುಮಾ, ಲ್ಯಾಬ್ ಟೆಕ್ನಿಷಿಯನ್ ಮಂಜುನಾಥ್, ಆರೋಗ್ಯ ಸಹಾಯಕಿಯರಾದ ನರಸಮ್ಮ, ಯಶೋದಮ್ಮ, ಕೆ. ಮಮತಾ ಉಪಸ್ಥಿತರಿದ್ದರು.
4. ದಿ. 03.07.2020ರಂದು ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಬೆಂಗಳೂರು ಹಾಗೂ ಪ್ರೊ.ಬಿ.ಕೃಷ್ಣಪ್ಪ ಟ್ರಸ್ಟ್ ವತಿಯಿಂದ ಶೇಷಾದ್ರಿಪುರಂ ಪದವಿ ಪೂರ್ವ ಕಾಲೇಜಿನ ಬೋಧಕೇತರ ಸಿಬ್ಬಂದಿಗಳಿಗೆ ಡಾ. ರಾಮಲಿಂಗೇಶ್ವರ (ಸಿಸಿರಾ) ಅವರು ಮಾಸ್ಕ್ ಮತ್ತು ಸ್ಯಾನಿಟೇಷನ್ ವಿತರಿಸಿದರು.
5. ದಿ. 08/07/2020ರಂದು ಬೆಂಗಳೂರಿನ ಶ್ರೀನಗರದಲ್ಲಿ ಹಿರಿಯ ಗಾಂಧಿವಾದಿ ಡಾ.ಎಸ್.ಎನ್. ಸುಬ್ಬರಾವ್ ಅವರೊಂದಿಗೆ ಸಂವಾದ ಮತ್ತು ಶಿಬಿರಗಳ ಕುರಿತು ಚರ್ಚೆ ನಡೆಯಿತು. ಇಂದಿರಾ ಕೃಷ್ಣಪ್ಪ, ಮೇಜರ್ ಈಶ್ವರ್ ಜೋಯಿಸ್, ಕು.ರಂಜಿನಿ ಹಾಗೂ ಡಾ.ವಿ. ಪ್ರಶಾಂತ ಪಾಲ್ಗೊಂಡಿದ್ದರು.
6. ದಿ. 08/07/2020ರಂದು ಗಾಂಧಿ ಅನುಯಾಯಿ ವೇಮಗಲ್ ಸೋಮಶೇಖರ್ ಅವರ ಮನೆಗೆ ಭೇಟಿ ನೀಡಿ ಹಿರಿಯ ಆರೋಗ್ಯ ಮತ್ತು ಅವರ ಓದು–ಬರವಣಿಗೆ ಕುರಿತು ಚರ್ಚಿಸಲಾಯಿತು ಹಾಗೂ ಮಾಸ್ಕ್‌ಗಳನ್ನು ಇಂದಿರಾ ಕೃಷ್ಣಪ್ಪ ವರು ವಿತರಿಸಿದರು. ಡಾ. ವಿ. ಪ್ರಶಾಂತ ಹಾಜರಿದ್ದರು.



ದಿನಾಂಕ: 11/01/2020 ರಂದು ಶೇಷಾದ್ರಿಪುರಂ ಕಾಲೇಜು, ಕೆಂಗೇರಿಯಲ್ಲಿ ಡಾ. ಹೆಚ್. ನರಸಿಂಹಯ್ಯ ಶತಮಾನೋತ್ಸವ ಸಮಾರಂಭವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಬಿ.ಟಿ. ಲಲಿಯಾನಾಯಕ್, ಡಾ. ಸಿದ್ದಲಿಂಗಯ್ಯ, ಶೂದ್ರ ಶ್ರೀನಿವಾಸ್ ಭಾಗವಹಿಸಿದ್ದರು. ಅಧ್ಯಕ್ಷತೆಯನ್ನು ಗಾಂಧಿ ಭವನದ ಅಧ್ಯಕ್ಷರಾದ ಡಾ. ವೂಡೇ ಪಿ. ಕೃಷ್ಣ ಅವರು ವಹಿಸಿದ್ದರು.



ದಿ: 01/07/2020ರಂದು ದೇವನಹಳ್ಳಿ, ವಿಜಯಪುರದ ಸರ್ಕಾರಿ ಸಮುದಾಯ ಆರೋಗ್ಯ ಕೇಂದ್ರದಲ್ಲಿ ವಿಶ್ವ ವೈದ್ಯರ ದಿನಾಚರಣೆಯನ್ನು ಗಾಂಧಿ ಭವನದ ಸಹಕಾರದೊಂದಿಗೆ ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಆಡಳಿತ ವೈದ್ಯಾಧಿಕಾರಿ ಡಾ. ಶ್ಯಾಮ್ ಸುಂದರ್ ಹಾಗೂ ಪ್ರಸೂತಿ ತಜ್ಞೆ ಕರ್ಪದಾ ಅವರನ್ನು ಸನ್ಮಾನಿಸಲಾಯಿತು. ವಿ.ನ್.ಸೂರ್ಯಪ್ರಕಾಶ, ಡಾ.ವಿ. ಪ್ರಶಾಂತ, ಎಚ್.ಐ.ವಿ. ಆಪ್ತ ಸಮಾಲೋಚಕಿ ಸುಮಾ. ಮಂಜುನಾಥ್, ನರಸಮ್ಮ, ಯಶೋದಮ್ಮ, ಕೆ.ಮಮತಾ ಹಾಜರಿದ್ದರು.



ದಿ. 03.07.2020ರಂದು ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಹಾಗೂ ಪ್ರೊ.ಬಿ.ಕೃಷ್ಣಪ್ಪ ಟ್ರಸ್ಟ್ ವತಿಯಿಂದ ಶೇಷಾದ್ರಿಪುರಂ ಪದವಿ ಪೂರ್ವ ಕಾಲೇಜಿನ ಬೋಧಕೇತರ ಸಿಬ್ಬಂದಿಗಳಿಗೆ ಡಾ. ರಾಮಲಿಂಗೇಶ್ವರ ಕಾರ್ಯದರ್ಶಿ ಮಾಸ್ಕು ಮತ್ತು ಸ್ಯಾನಿಟೇಷನ್ ವಿತರಿಸಿದರು.



ದಿ .08/07/2020ರಂದು ಗಾಂಧೀವಾದಿ ವೇಮಗಲ್ ಸೋಮಶೇಖರ್ ಅವರನ್ನು ಭೇಟಿ ನೀಡಿ ಹಿರಿಯರ ಆರೋಗ್ಯ ವಿಷಯಗಳ ಬಗ್ಗೆ ಚರ್ಚಿಸಲಾಯಿತು. ಇದೇ ಸಂದರ್ಭದಲ್ಲಿ ಮಾಸ್ಕ್‌ಗಳನ್ನು ಇಂದಿರಾ ಕೃಷ್ಣಪ್ಪ ವಿತರಿಸಿದರು. ಡಾ. ವಿ. ಪ್ರಶಾಂತ ಹಾಜರಿದ್ದರು.




ದಿ.27.06.2020 ರಂದು ಗಾಂಧಿ ಭವನದಲ್ಲಿ ನಡೆದ ಕೆಂಪೇಗೌಡ ದಿನಾಚರಣೆಯಲ್ಲಿ ಡಾ. ವೂಡೇ. ಪಿ. ಕೃಷ್ಣ, ಅಧ್ಯಕ್ಷರು, ಕಾರ್ಯಕ್ರಮ ಉದ್ಘಾಟಿಸಿದರು. ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ, ಪ್ರಶಾಂತ್, ಸಹ ಸಂಸ್ಥೆ ಪದಾಧಿಕಾರಿಗಳು ಹಾಗೂ ಸಿಬ್ಬಂದಿವರ್ಗದವರು ಭಾಗವಹಿಸಿದ್ದರು.




ದಿ. 08/07/2020ರಂದು ಶ್ರೀನಗರದಲ್ಲಿ ಹಿರಿಯ ಗಾಂಧಿವಾದಿ ಡಾ.ಎಸ್.ಎನ್. ಸುಬ್ಬರಾವ್ ಅವರೊಂದಿಗೆ ಇಂದಿರಾ ಕೃಷ್ಣಪ್ಪ, ಇವರು ಯುವಜನ ಶಿಬಿರಗಳ ವಿಚಾರಗೋಷ್ಠಿಗಳ ಕುರಿತು ಚರ್ಚೆ ನಡೆಸಿದರು.



ದಿ. 26 ಮೇ, 2020ರಂದು ರೆಡ್‌ಕ್ರಾಸ್ ಹಾಗೂ ರೋಟರಿ ಇಂಟರ್ ನ್ಯಾಷನಲ್ ಸಹಯೋಗದಲ್ಲಿ ನಗರದಲ್ಲಿ ಆಯೋಜಿಸಿದ್ದ ರಕ್ತದಾನ ಶಿಬಿರದಲ್ಲಿ ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ವೂಡೇ ಪಿ. ಕೃಷ್ಣ ಅವರು ರೋಟರಿ ಸಂಸ್ಥೆಯ ಆನಂದ್ ರಾಮಚಂದ್ರ, ರೆಡ್‌ಕ್ರಾಸ್ ರಾಜ್ಯ ಸಂಯೋಜಕ ರಾಜು ಚಂದ್ರಶೇಖರ್, ನಟ ಶೈನ್ ಶೆಟ್ಟಿ, ಕಾರ್ಖಾನೆಗಳ ಸಹಾಯಕ ನಿರ್ದೇಶಕ ಎಂ.ಎಸ್. ಸೋಮಶೇಖರ್, ರೋಟರಿ ಸಂಸ್ಥೆಯ ಯು.ಬಿ. ಭಟ್, ಶಿಕ್ಷಣ ತಜ್ಞ ಬಿ.ಎ. ಅನಂತರಾಮ್ ಉಪಸ್ಥಿತರಿದ್ದರು.



ದಿನಾಂಕ: 29/06/2020 ರಂದು ಗಾಂಧಿ ಭವನಕ್ಕೆ ಆಗಮಿಸಿದ ಮಾಜಿ ರಾಜ್ಯಸಭಾ ಸದಸ್ಯರು ಹಾಗೂ ಮಾಜಿ ಅಧ್ಯಕ್ಷರು ಕೇಂದ್ರ ಖಾದಿ ಮಂಡಳಿ ಎಚ್. ಹನುಮಂತಪ್ಪ ಅವರಿಗೆ ಗೌರವ ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ ಅವರು ಮಾಸ್ಕ್‌ಗಳನ್ನು ಹಾಗೂ ಬಾಪು ಪ್ರಪಂಚ ಪುಸ್ತಕ ನೀಡಿ ಗೌರವಿಸಲಾಯಿತು. ಇದೇ ಸಂದರ್ಭದಲ್ಲಿ ರಾಜ್ಯದ ಕರೋನ ಪರಿಸ್ಥಿತಿಯ ಬಗ್ಗೆ ಜಾಗೃತಿ ಚರ್ಚೆ ನಡೆಯಿತು.



ಪುಸ್ತಕ ವಿಭಾಗ

(ಪ್ರಸಿದ್ಧ ಕೃತಿಗಳ ಸಂಕ್ಷಿಪ್ತ ಭಾಗ ನಿಯತವಾಗಿ ಬರಲಿವೆ)

ROOTS : Sold Into Slavery

Condensed form of the story by Alex Harley

Continued from previous edition...

More than a decade ago, Alex Haley began a long and arduous attempt to discover his ancestral roots. Like most black Americans, he had little to go on at first-only a few meagre clues, given to him in childhood. But as he pursued his search, the pieces of his ancient family puzzle began to fall into place. The story that finally emerged portrays not merely the agony of one man but, in a very real sense, the epic journey of the American Negro. In "By Slave Ship to America,' the first part of 'Roots, which appeared last month, Haley re-created the boyhood of his African ancestor, Kunta Kinte, Kunta's capture in 1767 by slavers and the ordeal of his passage across the Atlantic on a slave ship. 'Sold into Slavery' brings the young Kunta to the alien and cruel world of colonial America.

At dusk, the rolling box turned off on to a small road and drew up before a large white house. Kunta saw several black people there, and hope surged in him when the toubob walked off towards the house. Would these black ones free him now? But they did nothing, and he wondered with a burst of rage what kind of blacks these were who acted as the goats of the toubob.

Kunta slept on the ground chained to a stake. In the morning, he had barely time to make his dawn prayer to Allah, bowing to the east, before they were on the road again. The sights and sounds were similar those of the previous day. Twice more, always distant from the road, he saw large white toubob houses; near by were mud and log huts where Kunta guess the blacks lived.

After the sun set on the third day, the box turned off the main road. Squinting through the moonlit darkness, Kunta could see the ghostly whiteness of another big house. Soon the box came to a stop.The food got down, spoke to the black one and went into the house. The box creaked on towards some small huts and stopped again. Kunta heard the click of the thing which had held his chain. The black one got down, came to the edge of the box and with one arm lever Kaun ta up over the side to the ground.

In that instant the smaller Kunta exploded upwards, his hands clamping about the black one's throat like the jaws of a hyena. The black one gave a horse sound, then he was pounding and clawing at Kunta's face and arms.Kunta's hands clamped tighter still until the man stumbled backwards and went limp.

Springing up, Kunta fcd wildly towards where he could see, in the moonlight, a distant forest. He kept low, his flailing legs crashing through frosted cornstalks. His long-unused muscles screamed with pain, but the cold, rushing air felt good, and he granted with the plea sure of being free again. He reached the forest and plunged in, stumbling through brambles and vines, deeper and deeper, until suddenly he burst upon low scrub. He saw with a shock that he had come to another wide field and another white house.

He ran back into the thickest part of the woods, his bare feet cut and bleeding. Then, on all fours, he crawled into deep undergrowth and passed the night there. As dawn came he knelt and, facing the east, prayed to Allah.

To be continued...

ಬಾಪು ಪ್ರಪಂಚ

ಗಾಂಧಿಜೀ ಅವರ ಜೀವನ, ತತ್ವ ಸಿದ್ಧಾಂತಗಳನ್ನು ಮತ್ತು ಅವರ ಕುರಿತಾದ ಕಾರ್ಯಕ್ರಮಗಳು ಮತ್ತು ಕಾರ್ಯಚಟುವಟಿಕೆಗಳನ್ನು ಓದುಗರಿಗೆ ಪರಿಚಯ ಮಾಡಿಕೊಡುವುದು ಬಾಪು ಪ್ರಪಂಚ ಮಾಸ ಪತ್ರಿಕೆಯ ಮುಖ್ಯ ಆಶಯವಾಗಿದೆ. ಗಾಂಧೀಜಿ ಅವರ ಕುರಿತಾದ ವಿಚಾರ ಸಂಕಿರಣ, ಸಂವಾದ, ಚರ್ಚೆ, ವಿಶೇಷ ಶಿಬಿರಗಳು, ಕಾರ್ಯಚಟುವಟಿಕೆಗಳ ಮೂಲಕ ಗಾಂಧಿಜೀ ಅವರ ಸಿದ್ಧಾಂತಗಳ ವಿಶ್ವಮಟ್ಟದ ಅನುಸಂಧಾನಗಳನ್ನು ಯುವಜನತೆಗೆ ನೀಡುವುದು ಬಾಪು ಪ್ರಪಂಚದ ಉದ್ದೇಶವಾಗಿದೆ. ಇಂದಿನ ಯುವ ಜನತೆ, ಗಾಂಧಿಜೀ ಅವರ ಜೀವನ ಮತ್ತು ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಲಿ ಎಂಬ ಮಹದಾಸೆಯನ್ನು ಪತ್ರಿಕೆ ಹೊಂದಿದೆ.

- ಓದುಗರು ತಮ್ಮ ಅಭಿಪ್ರಾಯಗಳು, ಸಲಹೆಗಳು, ಸೂಚನೆಗಳನ್ನು ಪತ್ರಗಳ ಮುಖಾಂತರ ಅಥವಾ ಇಮೇಲ್ ಮೂಲಕ ಕೆಳಕಂಡ ವಿಳಾಸಕ್ಕೆ ಕಳುಹಿಸಬಹುದು.
  ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಗಾಂಧೀ ಭವನ, ಕುಮಾರ ಪಾರ್ಕ್ ಪೂರ್ವ, ಬೆಂಗಳೂರು-56001, ದೂರವಾಣಿ : 080-22261967, 9738605799, gandhibhavanbangalore@gmail.com. gandhibhavanabengaluru@gmail.com ನೀಡಬಹುದು.
- ಗಾಂಧೀಜಿ ಅವರ ವಿಚಾರಗಳ ಕುರಿತ ಲೇಖನಗಳು, ವಿಶೇಷ ಸಂಗತಿಗಳು, ಚಿತ್ರಗಳು ಇತ್ಯಾದಿಗಳನ್ನು ಓದಗರು ನೀಡಬಹುದು. ಅವುಗಳನ್ನು ಪ್ರಕಟಿಸುವ ಆಯ್ಕೆ ಸಂಪಾದಕರದ್ದಾಗಿರುತ್ತದೆ.
- ಲೇಖನಗಳಲ್ಲಿ ಅಳವಡಿಸಬಹುದಾದ ಚಿತ್ರಗಳನ್ನೂ ಕಳುಹಿಸಬಹುದು ಹಾಗೂ ನೆರವು ಪಡೆದ ಆಕರಗಳನ್ನು ಸೂಚಿಸುವುದು. ಸಂಪರ್ಕಕ್ಕಾಗಿ ತಮ್ಮ ದೂರವಾಣಿ ಸಂಖ್ಯೆಯನ್ನು, ಪೂರ್ಣ ವಿಳಾಸವನ್ನು ಕಡ್ಡಾಯವಾಗಿ ಕಳುಹಿಸುವುದು
- ಜಾಹೀರಾತುಗಳಿಗೆ ಸಂಪರ್ಕ : ಸಹ ಕಾರ್ಯದರ್ಶಿ : 9738605799
  ಕಾರ್ಯನಿರ್ವಹಣಾಧಿಕಾರಿ : 9980307286

BAPU PRAPANCHA

Bapu Prapancha magazine is published with an objective to spread the life, thoughts, and principles of Gandhi. Seminars, symposia, discussions, camps, and various special activities conducted and internaitonal level researches done reflecting ideas and thoughts are published in this magazine. And this is intended to create to an urge among the youth and students to take him as an ideal in their life.

- Readers are requested to give their opinions, suggestions and viewpoints to the following address and email. Karnataka Gandhi Smaraka Nidhi, Gandhi Bhavana, Kumara Park East, Bengaluru-56001, Ph: 080-22261967; 9738605799;
  gandhibhavanbangalore@gmail.com; gandhibhavanbengaluru@gmail.com.
- Readers are also requested to send articles, special events, important anecdotes or any other information related to Gandhi and Gandhian thoughts. Responsibility to select such matter solely lies with the editor of the magazine.
- Readers shall also providephotos or illustration related their articles, if an . They shall also mention the references, if any, and send their complete address and phone numbers (mandatory).
- For advertisements please contact: Joint Secretary, Ph: 9738605799/ Executive Officer : 9980307286

ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಪ್ರಕಟಣೆಗಳು



ಚಂದಾದಾರರಾಗಲು ಈ ಕೆಳಗಿನಂತೆ ಅರ್ಜಿಯನ್ನು ಭರ್ತಿಮಾಡಿ ಕೆಳಕಂಡ ವಿಳಾಸಕ್ಕೆ ಕಳುಹಿಸುವುದು

ಹೆಸರು ______________________

ವಿಳಾಸ ______________________

______________________ ನಗರ ______________________

ಪಿನ್‌ಕೋಡ್ ____________ ಜಿಲ್ಲೆ ____________ ರಾಜ್ಯ ____________

ಮೊಬೈಲ್ ನಂ. ____________ ಸ್ಥಿರ ದೂರವಾಣಿ ____________

ಹೊಸದಾಗಿ ಚಂದಾದಾರರು ☐ ನವೀಕರಣ ☐

ಗೌರವ ಕಾರ್ಯದರ್ಶಿ, ಗಾಂಧಿಭವನ, ಕುಮಾರಪಾರ್ಕ್ ಪೂರ್ವ, ಬೆಂಗಳೂರು.– 560001
ಫೋನ್: 080–22261967

ಬಾಪು ಪ್ರಪಂಚ ಮಾಸಿಕ : ಚಂದಾ ವಿವರ

ಚಂದಾ ಅವಧಿ	ಚಂದಾ	ರಿಯಾಯಿತಿ ದರ	ದೊರಕುವ ಸಂಚಿಕೆಗಳು
ಬಿಡಿ ಪ್ರತಿ	20/–		1
1 ವರ್ಷಕ್ಕೆ	240/–	170	13
2 ವರ್ಷಕ್ಕೆ	480/–	400/–	26
3 ವರ್ಷಕ್ಕೆ	720/–	630/–	39

- ಚಂದಾ ಹಣವನ್ನು ಡಿಡಿ ಅಥವಾ ಆನ್‌ಲೈನ್ ಮುಖಾಂತರ ಕಾರ್ಯದರ್ಶಿ, ಗಾಂಧಿ ಭವನ ಇವರ ಹೆಸರಿನಲ್ಲಿ ಕಳುಹಿಸುವುದು
- ಬ್ಯಾಂಕ್ ಮಾಹಿತಿ ಖಾತೆ ಸಂಖ್ಯೆ 0788101000778 ಕೆನರಾ ಬ್ಯಾಂಕ್, ಮಾಧವನಗರ ಶಾಖೆ, ಬೆಂಗಳೂರು, IFSC ಸಂಖ್ಯೆ CNRB0000788
- ಚಂದಾ ಕಳುಹಿಸುವ ವಿಳಾಸ : ಕಾರ್ಯದರ್ಶಿ, ಗಾಂಧಿಭವನ, ಕುಮಾರಪಾರ್ಕ್ ಪೂರ್ವ, ಬೆಂಗಳೂರು.– 56001, ಫೋನ್: 080–22261967
  ಕಚೇರಿಯೊಡನೆ ವ್ಯವಹರಿಸುವಾಗ ಡಿಮ್ಯಾಂಡ್ ಡ್ರಾಫ್ಟ್ ಕಳುಹಿಸಿದ ದಿನಾಂಕವನ್ನು ಚಂದಾದಾರರು ನಮೂದಿಸಬೇಕು. ಯಾವುದೇ ಮಾಹಿತಿಗಾಗಿ ಸಂಪರ್ಕಿಸಿ :
  ಸಹ ಕಾರ್ಯದರ್ಶಿ : 9738605799, ಕಾರ್ಯನಿರ್ವಹಣಾಧಿಕಾರಿ : 9980307286

ಪಾವತಿ: ಬ್ಯಾಂಕಿನ ಹೆಸರು ____________ ಡಿಡಿ ಸಂಖ್ಯೆ ____________


ಮೊತ್ತ ____________ ದಿನಾಂಕ ____________

ನೆಟ್ ಬ್ಯಾಂಕ್ ವಿವರ ______________________

ಚಂದಾದಾರರ ಹೆಸರು ಮತ್ತು ಸಹಿ

ದಿನಾಂಕ

ಬಾಪು ಪ್ರಪಂಚ ಕನ್ನಡ-ಇಂಗ್ಲಿಷ್ ಮಾಸ ಪತ್ರಿಕೆ
RN No: KRBIL/2019/77950
MAG(3)NPP/159/2019-2020
Bapu Prapancha Date of Publication : 15th July posted on 20th July at Bengaluru - 560001
Registered No. KARBIL/2019/77950 Total Pages : 28+4 Cover pages



GEORGE BERNARD SHAW 26 JULY 1856 – 2 NOVEMBER 1950)

known at his insistence simply as Bernard Shaw, was an Irish playwriter, critic, polemicist and political activist. His influence on Western theatre, culture and politics extended from 1880s untill to his death and beyond. He wrote more than sixty plays, including major works such as Man and Superman (1902), Pygmalion (1912) and Saint Joan (1923). With a range incorporating both contemporary satire and historical allegory, Shaw became the leading dramatist of his generation, and in 1925 was awarded the Nobel Prize in Literature. Following a political awakening, he joined the gradualist Fabian Society and became its most prominent pamphleter. Shaw had been writing plays for years before his first public success, Arms and the Man in 1894. Influenced by Henrik Ibsen, he sought to introduce a new realism into English-language drama, using his plays as vehicles to disseminate his political, social and religious ideas. By the early twentieth century his reputation as a dramatist was secured with a series of critical and popular successes that included Major Barbara, The Doctor's Dilemma and Caesar and Cleopatra.



ತ್ರಿವೇಣಿ (ಶ್ರೀಮತಿ ಅನಸೂಯ ಶಂಕರ್) (01.09.1928 – 29.07.1963)

ಇವರು ಕನ್ನಡದ ಪ್ರಮುಖ ಕಾದಂಬರಿಕಾರರಲ್ಲೊಬ್ಬರು. ಹಲವಾರು ಜನಪ್ರಿಯ ಕಾದಂಬರಿಗಳ ಮೂಲಕ ಪ್ರಸಿದ್ಧರಾಗಿದ್ದಾರೆ. ತ್ರಿವೇಣಿಯವರು ಸೆಪ್ಟಂಬರ್ 1, 1928ರಂದು ಮಂಡ್ಯದಲ್ಲಿ ತಂದೆ ಬಿ.ಎಮ್. ಕೃಷ್ಣಸ್ವಾಮಿ ಮತ್ತು ತಾಯಿ ತಂಗಮ್ಮ ಅವರ ಮಗಳಾಗಿ ಜನಿಸಿದ್ದರು. ತಂದೆ ಪ್ರಸಿದ್ಧ ವಕೀಲರು, 1947ರಲ್ಲಿ ಮಹಾರಾಣಿ ಕಾಲೇಜಿನಿಂದ ಮನಃಶಾಸ್ತ್ರದಲ್ಲಿ ಸಿದ್ದೇಗೌಡ ಚಿನ್ನದ ಪದಕದೊಂದಿಗೆ ಬಿ.ಎ. ಪದವಿ ಪಡೆದರು. ನಂತರ ಮಂಡ್ಯ ಪ್ರೌಢಶಾಲೆಯಲ್ಲಿ ಅಧ್ಯಾಪಕಿಯಾಗಿ ಸೇವೆ ಆರಂಭಿಸಿದರು.

ಶಾಲೆಯಲ್ಲಿ ದಾಖಲಾದ ಹೆಸರು 'ಅನುಸೂಯಾ'. ಆತ್ಮೀಯರು 'ಅಂಚು' ಎಂದು ಕರೆಯುತ್ತಿದ್ದರು. ಕಾದಂಬರಿಗಾರ್ತಿ ಎಂ.ಕೆ. ಇಂದಿರಾ ಅವರು ಇವರನ್ನು 'ತ್ರಿವೇಣಿ ಎಂದು ಕರೆದರು. ಅದೇ ಹೆಸರಿನಲ್ಲಿ ಅನುಸೂಯಾ–'ತ್ರಿವೇಣಿ' ತಮ್ಮ ಮೊದಲ ಕಥೆಯನ್ನು ಪತ್ರಿಕೆಗೆ ಕಳಿಸಿದರು. ಸಂಪಾದಕರು 'ತ್ರಿವೇಣಿ' ಹೆಸರೇ ಚೆನ್ನಾಗಿದೆ ಅದನ್ನೇ ಮುಂದುವರಿಸಿ ಎಂದು ಹೇಳಿದರು. ಇವರು ಮನಃಶಾಸ್ತ್ರಕ್ಕೆ ಸಂಬಂಧಪಟ್ಟ ಅನೇಕ ಸಣ್ಣ ಕಥೆಗಳು ಹಾಗೂ ಕಾದಂಬರಿಗಳನ್ನು ಬರೆದರು. ಮನೋವೈಜ್ಞಾನಿಕ ಕಥಾವಸ್ತುವಿರುವ ಇವರ ಕಥೆಗಳು ಕಾದಂಬರಿಗಳು ಬಹಳ ಜನಪ್ರಿಯವಾದವು. ಅವುಗಳಲ್ಲಿ ಹೂವು ಹಣ್ಣು, ಬೆಳ್ಳಿಮೋಡ, ಶರಪಂಜರ, ಮುಕ್ತಿ, ಹಣ್ಣೆಲೆ ಚಿಗುರಿದಾಗ ಚಲನ ಚಿತ್ರಗಳಾಗಿವೆ. ಇವರು 21 ಕಾದಂಬರಿಗಳನ್ನು , ಮೂರು ಕಥಾ ಸಂಕಲನಗಳನ್ನು ರಚಿಸಿದ್ದಾರೆ. ಅನೇಕ ಪ್ರಶಸ್ತಿ ಪುರಸ್ಕಾರಗಳು ಇವರ ಕೃತಿಗಳಿಗೆ ಸಂದಿವೆ.



ಗೀತಾ ನಾಗಭೂಷಣ್ ನುಡಿ ನಮನ (ಮಾರ್ಚ್ 25, 1942 – ಜೂನ್ 28, 2020)

ಕನ್ನಡ ಕಥನ ಸಾಹಿತ್ಯಕ್ಕೆ ಅದುವರೆವಿಗೂ ಪರಿಚಯವಿಲ್ಲದ ಸಮುದಾಯದ ಪರಿಚಯವನ್ನು ಕಥೆ–ಕಾದಂಬರಿಗಳ ಮೂಲಕ ಮಾಡುತ್ತಾ, ದಮನಿತರನ್ನು ಶಿಷ್ಟ ಸಮಾಜ, ಅಮಾನವೀಯವಾಗಿ ನಡೆಸಿಕೊಂಡ ಪರಿಯನ್ನು ಹಲವು ಆಯಾಮಗಳಲ್ಲಿ ಕಟ್ಟಿಕೊಟ್ಟಿದ್ದಾರೆ. ಒಟ್ಟು 27 ಕಾದಂಬರಿಗಳು, ಮೂರು ಕಥಾ ಸಂಕಲನಗಳು ಮತ್ತು ಸಂಕೀರ್ಣ – 2 ಕೃತಿಗಳನ್ನು ರಚಿಸಿದ್ದಾರೆ. ಇವರ ಕಥೆ, ಕಾದಂಬರಿಗಳು ಜನಪ್ರಿಯ ಪತ್ರಿಕೆಗಳಾದ ತರಂಗ, ಸುಧಾ, ಮಯೂರ, ಲಂಕೇಶ ಪತ್ರಿಕೆ, ಪ್ರಜಾಮತ, ಮಂಗಳಗಳಲ್ಲಿ ಧಾರವಾಹಿಯಾಗಿ ಪ್ರಕಟಗೊಂಡು ಜನಮೆಚ್ಚುಗೆ ಗಳಿಸುತ್ತಿತ್ತು. ಇವರ ಕಾದಂಬರಿ 'ಹಸಿಮಾಂಸ ಮತ್ತು ಹದ್ದುಗಳು' ಕೃತಿಯು "ಹೆಣ್ಣಿನ ಕೂಗು" ಎಂಬ ಹೆಸರಿನಲ್ಲಿ ಚಲನಚಿತ್ರವಾಗಿದೆ. ಇವರ ಕಥೆಗಳು ಜೋಗಿಣಿ, ಅವ್ವ, ಸತ್ತ ಹೆಣ್ಣಿನ ಸುತ್ತ, ಜೀವನ ಚಕ್ರ, ನೀಲಗಂಗಾ ಕೃತಿಗಳು ನಾಟಕ ರೂಪದಲ್ಲಿ ಮತ್ತು ಧಾರಾವಾಹಿಯಾಗಿ ಕಿರುತೆರೆಯಲ್ಲಿ ಪ್ರದರ್ಶನಗೊಂಡಿವೆ. ಆಕಾಶವಾಣಿಯಲ್ಲಿ 50 ಕಥೆಗಳು ಮತ್ತು 15 ನಾಟಕಗಳು ಪ್ರಸಾರವಾಗಿವೆ. ಇವರು ಕರ್ನಾಟಕ ಸಾಹಿತ್ಯ ಅಕಾಡೆಮಿ ಸದಸ್ಯೆ ಮತ್ತು ಅಧ್ಯಕ್ಷೆಯಾಗಿದ್ದರು. ಹಾಗೂ ಗುಲ್ಬರ್ಗಾ ಜಿಲ್ಲೆಯ 5ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷೆಯಾಗಿದ್ದರು. ಅನೇಕ ಪ್ರಾಧಿಕಾರಗಳ ಮತ್ತು ಆಯ್ಕೆ ಸಮಿತಿಗಳ ಸದಸ್ಯೆಯಾಗಿದ್ದರು. ಕರ್ನಾಟಕ ಸಾಹಿತ್ಯ ಅಕಾಡೆಮಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ದಾನ ಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿಗಳು ಅರಸಿ ಬಂದಿವೆ. ಇದರೊಂದಿಗೆ ಇವರ ಅನೇಕ ಕೃತಿಗಳಿಗೆ, ನಾಡಿನ ಪ್ರತಿಷ್ಠಿತ ಸಂಸ್ಥೆಗಳಿಂದ ಸಾಹಿತ್ಯ ಪ್ರಶಸ್ತಿಗಳು ಸಂದಿವೆ. ಕನ್ನಡ ಭಾಷೆ, ಸಾಹಿತ್ಯಕ್ಕಾಗಿ ಅನುಪಮ ಸೇವೆ ಸಲ್ಲಿಸಿದ ಗೀತಾ ನಾಗಭೂಷಣ ಅವರು 78ನೇ ವಯಸ್ಸಿನಲ್ಲಿ ಕಾಣದ ಲೋಕದೆಡೆಗೆ ಹೆಜ್ಜೆ ಹಾಕಿದರು.

Book-Post

ಇವರಿಗೆ, ____

If undelivered please return to:
Hon. Secretary, Karnataka Gandhi Smaraka Nidhi, Gandhi Bhavana, Kumara Park Post
Bengaluru - 560001,Ph: 080 22261967, Email : gandhibhavanabengaluru@gmail.com

Printed at Published by Secretary, Karnataka Gandhi Smaraka Nidhi on behalf of Gandhi Bhavana, Kumarapark East, Bengaluru - 560001, Ph : 080 22261967, Printed at CreativeGeekZ, #58, Yadhava College Road, Madhavanagara Bengaluru - 560001, Ph : 080 40927049